ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 27 ಸೆಪ್ಟೆಂಬರ್ 16, 1979 40 ಪೈಸೆ

ಎ. ಐ. ಸಿ. ಸಿ. ಅಧಿವೇಶನ

ವಿಭಜನಾ ಪೂರ್ವದ ಎ.ಐ.ಸಿ.ಸಿ ಯೆನ್ನಲಾದ ಕಾಂಗ್ರೆಸ್ ಸಭೆಯು ಇದೇ 12, 13ರಂದು ಬೆಂಗಳೂರಿನಲ್ಲಿ ಸೇರಿತು. 1978ರ ವಿಭಜನೆಯ ಪೂರ್ವದಲ್ಲಿದ್ದ ಎಲ್ಲ ಕಾಂಗ್ರೆಸ್ಸಿಗರನ್ನೂ, 1969ರಲ್ಲಿ ಕಾಂಗ್ರೆಸ್ ಒಡೆದಾಗಲೂ ಕಾಂಗ್ರೆಸ್‌ನಲ್ಲಿದ್ದವರನ್ನೂ ಒಟ್ಟಿಗೆ ಸೇರಿಸಿ ಐಕ್ಯ ಕಾಂಗ್ರೆಸ್ಸನ್ನು ಪುನಃಸ್ಥಾಪಿಸುವ ಉದ್ದಿಶ್ಯ ಆರಂಭದಲ್ಲಿ ಈ ಸಭೆಯ ಸಂಚಾಲಕರದಾಗಿತ್ತು. ಆದರೆ ಕಳೆದೆರಡು ತಿಂಗಳಲ್ಲಿ ನಡೆದ ಮಹತ್ವದ ರಾಜಕೀಯ ಬೆಳವಣಿಗೆಗಳಿಂದಾಗಿ ಆರಂಭದಲ್ಲಿದ್ದ ಉತ್ಸಾಹ ಈಗ ಕಡಿಮೆಯಾಗಿತ್ತು. ಕೇಂದ್ರದಲ್ಲಿದ್ದ ಜನತಾ ಸರಕಾರದ ರಾಜಿನಾಮೆ, ಚರಣ್‌ರವರ ನೇತೃತ್ವದಲ್ಲಿ ಜನತಾ (ಎಸ್) ಮತ್ತು ಕಾಂಗ್ರೆಸ್ (ಎಸ್) ಸರಕಾರದ ರಚನೆ ಮತ್ತದರ ರಾಜಿನಾಮೆ, ಲೋಕಸಭೆಯ ವಿಸರ್ಜನೆ ಮತ್ತು ಡಿಸೆಂಬರ್ ತಿಂಗಳಲ್ಲಿ ಹೊಸ ಲೋಕಸಭಾ ಚುನಾವಣೆಯ ಘೋಷಣೆ, ಚುನಾವಣೆಗೆ ಎಲ್ಲ ಪಕ್ಷಗಳ ಸಿದ್ಧತೆ ಮುಂತಾದ ಘಟನೆಗಳಿಂದ ಈ ಎ.ಐ.ಸಿ.ಸಿ ಸಭೆಗೆ ನಿರೀಕ್ಷಿಸಿದ ಮಹತ್ವ ಮತ್ತು ಬೆಂಬಲ ದೊರೆಯದಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

ಈ ಮಧ್ಯೆ ಮೂಲೆಗೆ ತಳ್ಳಲ್ಪಟ್ಟಿದ್ದ ಇಂದಿರಾಗಾಂಧಿ ಕಾಂಗ್ರೆಸ್ಸಿಗೆ ಅನಿರೀಕ್ಷಿತವಾಗಿ ದೇಶದ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುವ ಅವಕಾಶ

ಸಂಪಾದಕೀಯ

ದೊರೆಯಿತು. ಇದರಿಂದ ಅನೇಕ ಕಾಂಗ್ರೆಸ್ ನಾಯಕರು ಹಿಂದೆ ಇಂದಿರಾ ಗಾಂಧಿಯವರನ್ನು ವಿರೋಧಿಸಿದ್ದರೂ ಈಗ ಲೋಕಸಭಾ ಚುನಾವಣೆಯು ಬರುವುದರಿಂದ ಕಾಂಗ್ರೈಗೆ ಸೇರಲಾರಂಭಿಸಿದರು. ಈಗ ಉಳಿದಿರುವ ಕೆಲವರು ಮಾತ್ರ ಬೆಂಗಳೂರು ಸಭೆಯಲ್ಲಿ ಭಾಗವಹಿಸಿದ್ದರು.

ಈ ಸಭೆಯಲ್ಲಾದ ಮುಖ್ಯ ತೀರ್ಮಾನವೇನೆಂದರೆ ಕಾಂಗ್ರೆಸ್ ಸಂಸ್ಥೆಯನ್ನು ರಾಜನಾರಾಯಣರವರ ಜನತಾಪಕ್ಷದಲ್ಲಿ ವಿಲೀನಗೊಳಿಸದೆ ಪ್ರತ್ಯೇಕ ಸಂಸ್ಥೆಯಾಗಿ ಅದನ್ನು ಮುಂದುವರಿಸಬೇಕೆನ್ನುವುದಾಗಿದೆ. ಇಷ್ಟು ದಿವಸ ಅದರ ಅಧ್ಯಕ್ಷರಾಗಿದ್ದ ಶ್ರೀ ಸ್ವರಣ್‌ಸಿಂಗ್‌ರವರ ಬದಲಾಗಿ ಶ್ರೀ ದೇವರಾಜ್ ಅರಸುರವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿಯೂ ಸಭೆಯು ಆರಿಸಿತು. ಹೊಸ ಕಾರ್ಯಕಾರಿ ಸಮಿತಿಯನ್ನೂ, ಚುನಾವಣಾ ಸಮಿತಿಯನ್ನೂ ಆರಿಸಲಾಗಿದೆ. ಕೆಲವು ನಿರ್ಣಯಗಳನ್ನೂ ಮಾಡಲಾಗಿದೆ.

ಕಾಂಗ್ರೆಸ್ ಪಕ್ಷವು ಗೆದ್ದಲು ಹಿಡಿದ ಪಕ್ಷವೆಂದೂ, ಮುಳುಗುವ ಪಕ್ಷವೆಂದೂ ಶ್ರೀ ಅರಸುರವರೇ ಹಿಂದೆ ಹೇಳಿದ್ದರು. ಆದರೂ ಅದೇ ಸಂಸ್ಥೆಯ ಅಧ್ಯಕ್ಷರಾಗಿ ಅವರು ಈಗ ಆರಿಸಲ್ಪಟ್ಟಿರುವುದು ಸೋಜಿಗವೆನಿಸಬಹುದು. ಇದೊಂದು ದೇಶದ ರಾಜಕೀಯದಲ್ಲಾಗುತ್ತಿರುವ ತಿರುವು ಮುರುವುಗಳ ಪ್ರತಿಬಿಂಬವೆನ್ನಬಹುದು. ದಿನೇ ಕ್ಷೀಣವಾಗಿಕೊಂಡು ಬಂದ ಕಾಂಗ್ರೆಸ್ಸಿಗೆ ಹೊಸ ಶಕ್ತಿಯನ್ನೂ, ಚೈತನ್ಯವನ್ನೂ ಕೊಡುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

[ಕಡೆಯ ಪುಟ ನೋಡಿ]

ಹೋರಾಟದ ಕಣದಲ್ಲಿರುವ ಕಾರ್ಮಿಕರಿಗೆ ಸೌಹಾರ್ದ ಬೆಂಬಲ

ಬೆಂಗಳೂರು ನಗರದ 175ಕ್ಕಿಂತಲೂ ಹೆಚ್ಚಿನ ಮಾಂಸಾಹಾರಿ ಹೋಟೆಲಿನಲ್ಲಿ ದುಡಿಯುತ್ತಲಿರುವ 5000 ಕ್ಕಿಂತಲೂ ಹೆಚ್ಚಿನ ಕೆಲಸಗಾರರು ಸಂಘಟಿತರಾಗಿ ಹೋರಾಟ ಪ್ರಾರಂಭಿಸಿದೊಡನೆಯೇ ದೊಡ್ಡ ಹೋಟೆಲು ಮಾಲಕರು ಅಕ್ರಮವಾಗಿ ಹೋಟೆಲು ಮುಚ್ಚಿ, ಕೆಲಸಗಾರರನ್ನು ವಜಾ ಮಾಡಿ, ಸುಳ್ಳು ಮೊಖದ್ದಮೆಗಳನ್ನು ದಾಖಲು ಮಾಡಿ ಸಂಘಟನೆ ಹತ್ತಿಕ್ಕಲು ಯತ್ನಿಸುತ್ತಲಿರುವರು. 15 ಹೋಟೆಲು ಮಾಲಿಕರು ಲಾಕ್‌ಔಟ್ ಮಾಡಿರುವರು. ಯಾವುದೇ ಕಾನೂನುಗಳನ್ನು ಜಾರಿ ಮಾಡದಿರುವ ಈ ಮಾಲಕರ ಮೇಲೆ ಸರಕಾರ ಕ್ರಮವಹಿಸುತ್ತಿಲ್ಲ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಶಾತಗುಣಿ ಎಸ್ಟೇಟಿನಲ್ಲಿದುಡಿಯುತ್ತಾ ಬಂದಿರುವ ಸುಮಾರು 120 ಮಂದಿ ಹರಿಜನ ಕೆಲಸಗಾರರ ಪಾಡು ಬಹಳ ಶೋಚನೀಯವಾಗಿದೆ. ಲಕ್ಷಗಟ್ಟಲೆ ಲಾಭ ಗಿಟ್ಟಿಸುವ ಮಾಲಕ ರೋರಿಚ್ ದಂಪತಿಗಳ ಮೇಲೆ ಯಾವುದೇ ಕ್ರಮ ವಹಿಸುವಬದಲು, ನ್ಯಾಯಯುತವಾಗಿ ಹೋರಾಡುವ ಕಾರ್ಮಿಕರ ಮೇಲೆ ಪೋಲೀಸು ಕೇಸು ದಬ್ಬಾಳಿಕೆ ನಡೆಯುತ್ತಿವೆ. ಹರಿಜನರ ಉದ್ಧಾರದ ಮಾತನ್ನಾಡುವ ಸರಕಾರ, ಹರಿಜನ ಕಾರ್ಮಿಕರು ಅನ್ನವಿಲ್ಲದೆ ಸಾಯುವಂತಾದರೂ ಮಾಲಕರಿಗೇ ಸಹಾಯ ನೀಡುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಫೆರ್ರೋ ಅಲ್ಲೋಯ್ಸ್ ಕಂಪೆನಿಯ ಮಾಲಿಕರು ಕಾನೂನಿಗೆ ವಿರೋಧವಾಗಿ ಲಾಕ್‌ಔಟ್ ಮಾಡಿದ್ದು, ಕಾರ್ಮಿಕರು ಮತ್ತು ಕಾರ್ಮಿಕ ಮುಖಂಡರುಗಳ ಮೇಲೆ ಕ್ರಿಮಿನಲ್ ಕೇಸುಗಳನ್ನು ಹಾಕಿಸಿ ಸಂಘಟನೆ ಮುರಿಯಲು ಯತ್ನಿಸುತ್ತಲಿರುವರು. ಕಾರ್ಮಿಕ ಮುಂದಾಳು ಕಾಂ. ಸ್ಥಳೇಕರರೂ ಸೇರಿ ಸುಮಾರು 250 ಮಂದಿ ಕಾರ್ಮಿಕರು ದಾಂಡೇಲಿಯಿಂದ 15ಕಿಲೋಮೀಟರು ದೂರ ತೊಲಗಬೇಕೆಂಬ ಕೋರ್ಟಿನ ಆಜ್ಞೆಯನ್ನೂ ಪಡೆದಿರುವರು!

ಎಷ್ಟೇ ತೊಂದರೆ ಇದ್ದರೂ, ಕಳೆದ ಎರಡು ಮೂರು ತಿಂಗಳುಗಳಿಂದ ಎದೆಗುಂದದೆ ಹೋರಾಡುತ್ತಾ ಬಂದಿರುವ ಈ ಕಾರ್ಮಿಕರಿಗೆ ಸೌಹಾರ್ದ ಬೆಂಬಲ ಸೂಚಿಸಲು ಮತ್ತು ತಕ್ಷಣವೇ ಸರಕಾರವು ಮಧ್ಯ ಪ್ರವೇಶಿಸಿ ನ್ಯಾಯ ಒದಗಿಸಿಕೊಡುವಂತೆ ಒತ್ತಾಯಿಸಲು ಸಿ. ಐ. ಟಿ. ಯು. ರಾಜ್ಯ ಸಮಿತಿ ಕರೆ ಮೇರೆಗೆ 13-9-1979 ರಂದು ರಾಜ್ಯದ ಬೇರೆ ಬೇರೆಡೆ ಸೌಹಾರ್ದ ಕಾರ್ಯಕ್ರಮ ಜರುಗಿತು. ಬೆಂಗಳೂರಿನಲ್ಲಿ ಕಾಂ. ಸೂರ್ಯನಾರಾಯಣರಾವ್, ಕಾಂ. ವಿ. ಜೆ. ಕೆ. ನಾಯರ್, ಕಾಂ. ಅನಂತರಾವ್ ಮೊದಲಾದವರ ಮುಖಂಡತ್ವದಲ್ಲಿ ವಿಧಾನ ಸೌಧದೆದುರು ಧರಣಿ ಸತ್ಯಾಗ್ರಹವು ನಡೆದು, ಸಮಾಜ ಅಭಿವೃದ್ಧಿ ಮತ್ತು ಕಾರ್ಮಿಕರ ಇಲಾಖೆ ಕಾರ್ಯದರ್ಶಿಯವರಿಗೆ ಮನವಿಯನ್ನು ಅರ್ಪಿಸಲಾಯ್ತು. ೦

ಯಂಗ್‌ಟರ್ಕ್ ಚಂದ್ರಶೇಖರ್ ನಡೆದುಬಂದ ಹಾದಿ

ಜನಪರ ರಾಜಕಾರಣದಿಂದ ಜನಸಂಘದ ರಾಜಕೀಯಕ್ಕೆ

ಜನತಾಪಕ್ಷದ ಅಧ್ಯಕ್ಷ ಚಂದ್ರಶೇಖರ್‌ಗೆ ಒಂದು ವಿಶೇಷ ಹೆಸರಿದೆ. ಅದು ಅವರ, ಜಾತ್ಯತೀತ ಮತ್ತು ವಿಚಾರವಾದಿ ಪರವಾದ ನಿಲುವುಗಳಿಗಾಗಿ. ಚಂದ್ರಶೇಖರರು ಕಾಂಗ್ರೆಸ್ಸಿನ ಎಂ. ಪಿ. ಯಾಗಿದ್ದುಕೊಂಡೇ ಕಾಂಗ್ರೆಸ್ ಮಂತ್ರಿಗಳ ವಿರುದ್ಧ ಸಿಡಿದೆದ್ದವರು. ಕಾಂಗ್ರೆಸ್ ಮಂತ್ರಿಗಳ ರಕ್ಷಣೆಯಲ್ಲಿ ಈ ದೇಶದ ಏಕಸ್ವಾಮ್ಯ ಮನೆತನಗಳು ಮಾಡುತ್ತಿದ್ದ ಲೂಟಿಯನ್ನೆಲ್ಲ ಬಯಲಿಗೆಳೆಯುತ್ತಿದ್ದವರು ಚಂದ್ರಶೇಖರ್. ಅವರ ಈ ನಿಷ್ಠುರ ಕ್ರಮಗಳಿಗಾಗಿ ಅವರನ್ನು ಮತ್ತು ಅವರ ಸಂಗಾತಿಗಳನ್ನು "ಯಂಗ್‌ಟರ್ಕ್ಸ್" ಎಂದು ಕರೆಯಲಾಗುತ್ತಿತ್ತು. ಈ ಬಂಡಾಯಗಾರ ಚಂದ್ರಶೇಖರ್ ಮತ್ತು ಅವರ ಸಂಗಾತಿಗಳನ್ನು ಶ್ರೀಮತಿ ಇಂದಿರಾಗಾಂಧಿಯವರು ಸಹಜವಾಗೇ ತುರ್ತು ಪರಿಸ್ಥಿತಿಯಲ್ಲಿ ಜೈಲಿಗಟ್ಟಿದರು.

ಇಂದಿರಾ ಸರ್ವಾಧಿಕಾರದ ವಿರುದ್ಧ ಹೋರಾಡಿ ಎದ್ದು ಬಂದ ಜನತಾಪಕ್ಷ, ಒಂದು ಅಖಿಲ ಭಾರತ ಪಕ್ಷವಾಗಿ ರೂಪುಗೊಂಡದ್ದು 1977 ರ ಮೇ 1 ರಂದು. ಈ ಪಕ್ಷಕ್ಕೆ ಅಂದು ಅಧ್ಯಕ್ಷರಾಗಿ ಆಯ್ಕೆಯಾದವರು ಯಂಗ್‌ಟರ್ಕ್ ಚಂದ್ರಶೇಖರ್. ಇವರು ಆ ಸ್ಥಾನ ಅಲಂಕರಿಸಿದ್ದನ್ನು ನಾಡಿನ ಎಲ್ಲ ಪ್ರಗತಿಪರ ಶಕ್ತಿಗಳು, ಪ್ರಜಾಪ್ರಭುತ್ವ ಶಕ್ತಿಗಳು ಆದರದಿಂದ ಸ್ವಾಗತಿಸಿದವು. ಜನಪರವಾದ ಈ ಶಕ್ತಿಗಳು ಅಂದು ಚಂದ್ರಶೇಖರ್ ಬಗ್ಗೆ ಅನೇಕ ಭರವಸೆಗಳನ್ನು ಇಟ್ಟುಕೊಂಡಿದ್ದವು. ಶ್ರೀ ಚಂದ್ರಶೇಖರ್ ಮತ್ತು ಅವರ ಯಂಗ್‌ಟರ್ಕ್ ಸಂಗಾತಿಗಳು ಹಾಗೂ ಜಗಜೀವನ್ ರಾಮ್-ಬಹುಗುಣ ನೇತೃತ್ವದ ಸಿ. ಎಫ್. ಡಿ. ನಾಯಕರು ಮತ್ತು ಜನತಾ ಪಕ್ಷದೊಳಗಿದ್ದ ಸಮಾಜವಾದಿ ನಾಯಕರು ಪ್ರಗತಿಪರ ಹೆಜ್ಜೆಗಳನ್ನು ಇಡುತ್ತಾರೆಂದು ಅಂದು ಎಲ್ಲರ ನಂಬಿಕೆ. ಜನತಾ ಪಕ್ಷದೊಳಗೇ ಇದ್ದುಕೊಂಡು ಪಕ್ಷದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿದ್ದ ಜಾತ್ಯಂಧ-ಧರ್ಮಾಂಧ-ಕೋಮುವಾದಿ ಶಕ್ತಿಗಳಾದ ಆರ್. ಎಸ್. ಎಸ್. -ಜನಸಂಘೀಯರನ್ನು ಇವರು ಮಟ್ಟ ಹಾಕುತ್ತಾರೆಂದು ಎಲ್ಲ ಪ್ರಗತಿಪರರು ಆಶಿಸುತ್ತಿದ್ದರು. ಜನತಾ ಪಕ್ಷದೊಳಗೆ ತಾತ್ವಿಕ-ರಾಜಕೀಯ ಘರ್ಷಣೆ ಬರುವ ಸಮಯದಲ್ಲಿ ಚಂದ್ರಶೇಖರ್ ಮತ್ತು ಅವರ ಸಂಗಾತಿಗಳು, ಕೋಮುವಾದಿ ಆರ್. ಎಸ್. ಎಸ್ಸಿಗಳ ಪರ ನಿಲ್ಲುತ್ತಾರೆಂದು ಕನಸು ಮನಸ್ಸಿನಲ್ಲೂ ಯಾರೂ ಎಣಿಸಿರಲಿಲ್ಲ.

ದುರಾದೃಷ್ಟವಶಾತ್ ಚಂದ್ರಶೇಖರರು, ಕೋಮುವಾದಿ ಆರ್. ಎಸ್. ಎಸ್ಸಿಗರ ಪರ ಈಗ ನಿಂತಿದ್ದಾರೆ. ಒಂದು ಕಾಲಕ್ಕೆ, ಪ್ರಗತಿಪರ ವಿಚಾರಗಳ ಜಾತ್ಯತೀತ ನೀತಿಯ ಪ್ರತಿಪಾದಕರಾಗಿದ್ದ ಈ ಯಂಗ್‌ಟರ್ಕ್ ನಾಯಕ ಚಂದ್ರಶೇಖರ್, ಇಂದು ಜಾತ್ಯಾಂಧ ಆರ್. ಎಸ್. ಎಸ್ಸಿಗರ ರಕ್ಷಣೆಯ ನೇತಾರ! ಇಷ್ಟು ಮಾತ್ರವಲ್ಲ, ಭಾರತ ಕಮ್ಯುನಿಸ್ಟ್ ಚಳುವಳಿಯ ವಿರುದ್ಧದ ಅತಿ ದೊಡ್ಡ ಪ್ರಚಾರಕರೂ ಅವರಾಗಿದ್ದಾರೆ ಈಗ. ಯಾವುದೇ ಪಕ್ಷದೊಳಗೆ ಗುಂಪುಗಾರಿಕೆ, ಗುಪುಗಳ ಹೋರಾಟ ಸಹಜ. ಜನತಾಪಕ್ಷದೊಳಗಿನ ವಿಭಿನ್ನ ಗುಂಪುಗಳ ಹೋರಾಟವೂ ಸಹಜವಾದದ್ದೆ. ಜನತಾ ಪಕ್ಷ ಒಡೆದು ಹೋಗಲು ಅದರ ಒಳಗಿನ ಗುಂಪುಗಳ ಆಂತರಿಕ ಕಚ್ಚಾಟ ಒಂದು ಪ್ರಮುಖ ಕಾರಣವಾದರೂ, ಇದರಲ್ಲಿ ಆರ್. ಎಸ್.ಎಸ್. ಬಗೆಗಿನ ಧೋರಣೆ ಬಹು ಮುಖ್ಯ. "ಹಿಂದೂ ರಾಷ್ಟ್ರ" ನಿರ್ಮಾಣವೇ ನಮ್ಮ ಗುರಿ ಎಂದು ಬಹಿರಂಗವಾಗೇ ಸಾರುವ ಮಿಲಿಟರಿ ಮಾದರಿಯ ಸಂಘಟನೆಯಾದ, ಕೋಮುವಾದಿ ಆರ್. ಎಸ್. ಎಸ್ಸಿಗರ ಪ್ರಶ್ನೆಯೇ ಜನತಾಪಕ್ಷ ಒಡೆಯಲು ಬಹುಮುಖ್ಯ ಕಾರಣ. ಈ ಆರ್. ಎಸ್. ಎಸ್.-ಜನಸಂಘ ಶಕ್ತಿಗಳ ವಿರುದ್ಧ ಜನತಾ ಪಕ್ಷದೊಳಗೇ ಇದ್ದ ಚರಣ್‌ಸಿಂಗ್,

[ಕಡೆಯ ಪುಟ ನೋಡಿ]

ಕೋಟೇಶ್ವರದಲ್ಲಿ ಎಸ್. ಎಫ್. ಐ. ಸಭೆ

ದ. ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೋಕಿನ ಕೋಟೇಶ್ವರದಲ್ಲಿ ಎಸ್. ಎಫ್. ಐ. ನ ಪ್ರಥಮ ಸಭೆಯು ಸೆ. 9 ರಂದು ಜರುಗಿತು. ಸಭೆಗೆ ಮಾಧ್ಯಮಿಕ ಶಾಲೆಯಿಂದ ಪಿ. ಯು. ಸಿ. ಯ ವರೆಗಿನ ಎಲ್ಲ ವಿದ್ಯಾರ್ಥಿಗಳೂ ಆಗಮಿಸಿದ್ದರು. ಎಸ್. ಎಫ್. ಐ. ನ ದ. ಕನ್ನಡ ಜಿಲ್ಲಾ ಘಟಕದ ಉಪಾಧ್ಯಕ್ಷರಾದ ಕಾಂ. ಆರ್. ಜಯಕುಮಾರ್ ಅವರು ಎಸ್. ಎಫ್. ಐ. ನ ಧ್ಯೇಯ ಧೋರಣೆಗಳನ್ನು ವಿದ್ಯಾರ್ಥಿ ಮಿತ್ರರಿಗೆ ವಿವರಿಸಿದರು. ವಿದ್ಯಾರ್ಥಿ ಫೆಡರೇಷನ್ ಆಚರಿಸಲಿರುವ ಬೇಡಿಕೆ ದಿನಾಚರಣೆಯ ಮಹತ್ವವನ್ನು ಕುರಿತು ಕಾಂ. ವ. ಗಣೇಶಕಾರಂತ್ ತಿಳಿಸಿದರು. ಸಭೆಯನ್ನು ಉದ್ದೇಶಿಸಿ ಯುವ ಮುಂದಾಳುಗಳಾದ ಕಾಂ. ವೆಂಕಟೇಶ್‌ನಾಯಕ್ ಹಾಗೂ ಕಾಂ. ಮಹಾಬಲ ಅವರು ಮಾತನಾಡಿದರು.

ಪೋಲೀಸ್ ದೌರ್ಜನ್ಯದ ಖಂಡನೆ:

ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ದರದಲ್ಲಿ ರಿಯಾಯಿತಿ ದೊರೆಯಬೇಕೆಂಬ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗಾಗಿ ಶಾಂತಿಯುತ ಪ್ರದರ್ಶನ ಮಾಡಿದ ವಿದ್ಯಾರ್ಥಿಗಳ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯವನ್ನು ಎಸ್. ಎಫ್. ಐ. ನ ಕುಂದಾಪುರ ತಾಲ್ಲೂಕು ಸಮಿತಿ ಖಂಡಿಸಿದೆ. ಪೋಲೀಸರ ದೌರ್ಜನ್ಯದಿಂದ ನಾಶವಾದ ವಿದ್ಯಾರ್ಥಿಗಳ ವಸ್ತುಗಳಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಜಿಲ್ಲಾಧಿಕಾರಿಗಳನ್ನು ಎಸ್. ಎಫ್. ಐ. ಒತ್ತಾಯಿಸಿದೆ. ○

ಕೋಲಾರಜಿಲ್ಲಾ ರೈತಸಂಘ ಅಧ್ಯಕ್ಷರಾಗಿ ಜಿ. ಪಾಪಣ್ಣ

ಕೋಲಾರ ಜಿಲ್ಲಾ ರೈತಸಂಘದ ಅಧ್ಯಕ್ಷರಾಗಿ ಜಿಲ್ಲೆಯ ಜನಪ್ರಿಯ ರೈತ ಮುಖಂಡ ಕಾಂ. ಜಿ. ಪಾಪಣ್ಣನವರು ಆಯ್ಕೆಯಾದರು

ಸೆಪ್ಟೆಂಬರ್ 9-10ನೇ ತಾರೀಖು ಶಿಡ್ಲಘಟ್ಟದಲ್ಲಿ ನಡೆದ ಜಿಲ್ಲಾ ರೈತಸಂಘ ಸಮ್ಮೇಳನದಲ್ಲಿ ಕಾಂ. ಆರ್. ವೆಂಕಟರಾಮಯ್ಯನವರು ಉಪಾಧ್ಯಕ್ಷರಾಗಿಯೂ, ಕಾಂ. ಲಕ್ಷ್ಮಣರೆಡ್ಡಿ ಹಾಗೂ ಕಾಂ. ಕೆ.ಎಂ. ವೆಂಕಟೇಶ್ ಅವರುಗಳು ಕಾರ್ಯದರ್ಶಿ ಮತ್ತು ಜಂಟೀ ಕಾರ್ಯದರ್ಶಿಗಳಾಗಿ ಆಯ್ಕೆಗೊಂಡರು. ●

ಭೂಮಿಗಾಗಿ-ಕನಿಷ್ಟ ಕೂಲಿಗಾಗಿ ಹೊಳಲೂರು ಕೂಲಿಗಾರರ ಪ್ರದರ್ಶನ

ಶಿವಮೊಗ್ಗ ಜಿಲ್ಲೆಯ ಹೊಳಲೂರಿನ ಸುತ್ತಮುತಲ ರೈತರು ಮತ್ತು ಬೇಸಾಯ ಕೂಲಿಗಾರರು ಕನಿಷ್ಟ ಕೂಲಿಯ ಜಾರಿಗಾಗಿ ಮತ್ತು ಸರ್ಕಾರಿ ಭೂಮಿಯನ್ನು ಭೂರಹಿತ ರೈತರಿಗೆ ಹಂಚಬೇಕೆಂದು ಒತ್ತಾಯಿಸಿ ಸೆ. 3 ರಂದು ಮತಪ್ರದರ್ಶನ ನಡೆಸಿದರು. ಸುಮಾರು ಹತ್ತು ಮೈಲಿಗಳ ಕಾಲ್ನಡಿಗೆಯಲ್ಲಿ ಬಂದ ನೂರಾರು ರೈತಕಾರ್ಮಿಕರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಜಯವಾಗಲಿ, ನಮ್ಮ ಭೂಮಿ ನಮಗೆ ಕೊಡಿ, ಇನ್‌ಕಿಲಾಬ್ ಜಿಂದಾಬಾದ್ ಮುಂತಾದ ಘೋಷಣೆಗಳನ್ನು ಕೂಗುತ್ತಿದ್ದರು. ಕಾಲ್ನಡಿಗೆಯ ನೇತೃತ್ವವನ್ನು ಪಕ್ಷದ ಜಿಲ್ಲಾ ಸಮಿತಿಯ ಸದಸ್ಯ ಕಾಂ. ಶಿವಶಂಕರ್, ಕಾಂ. ಗೋಪಾಲ್‌ನಾಯಕ್ ಮತ್ತು ಎಸ್. ಎಫ್. ಐ. ನ ಜಿಲ್ಲಾ ಸಂಚಾಲಕ ಕೊಟ್ರೇಶಪ್ಪ ಅವರು ವಹಿಸಿದ್ದರು. ಮೆರವಣಿಗೆಕಾರರು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಅರ್ಪಿಸಿದರು. ಮನವಿ ಪತ್ರ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಆಶ್ವಾಸನೆ ಕೊಟ್ಟರು. ●

ವಿದ್ಯಾರ್ಥಿಗಳ ನ್ಯಾಯವಾದ ಕೇಳಿಕೆಗಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಬಲ ಪೋಲೀಸ್ ದೌರ್ಜನ್ಯದ ಖಂಡನೆ

ಮಂಗಳೂರಿನಲ್ಲಿ ವಿದ್ಯಾರ್ಥಿಗಳು ಹೋರಾಟ ನಡೆಸಿ ಪಡೆದಿರುವ ಬಸ್ಸು ಶುಲ್ಕ ವಿನಾಯಿತಿಯಂತೆ ಉಡುಪಿಯಲ್ಲಿಯೂ ನೀಡಬೇಕೆಂದು ಉಡುಪಿಯ ಶಾಲೆ ಕಾಲೇಜುಗಳ ವಿದ್ಯಾರ್ಥಿಗಳ ನ್ಯಾಯವಾದ ಬೇಡಿಕೆಯನ್ನು ಪರಿಶೀಲಿಸಿ ನ್ಯಾಯ ಒದಗಿಸುವ ಬದಲು ಹಟಮಾರಿ ಧೋರಣೆ ತಳೆದು ಬಸ್ಸುಗಳನ್ನು ರಸ್ತೆಗಿಳಿಸದೆ ನಾಗರೀಕರಿಗೆ ತೊಂದರೆ ನೀಡಿರುವ ಮಾಲಕರ ನೀತಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಡುಪಿ ತಾಲ್ಲೂಕು ಸಮಿತಿಯು ತೀವ್ರವಾಗಿ ಖಂಡಿಸಿದೆ.

ಮಂಗಳೂರಿನಲ್ಲಿ ಕನಿಷ್ಠ ಟಿಕೇಟು 0.20 ಪೈಸೆ. ಉಡುಪಿಯಲ್ಲಿ ಕನಿಷ್ಠ ಟಿಕೇಟು 0.25 ಪೈಸೆ ನಿರ್ಣಯಿಸಲು ಅಧಿಕಾರಿಗಳು ಅನುಮತಿ ನೀಡಿದ್ದನ್ನು ಸಾರಿಗೆ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ಪರಿಶೀಲಿಸಿ ಸಾರ್ವಜನಿಕರಿಗೆ ನ್ಯಾಯ ಒದಗಿಸುವಂತೆ ಕನಿಷ್ಠ 0.20 ಪೈಸೆ ಟಿಕೇಟನ್ನು ಉಡುಪಿಯಲ್ಲಿಯೂ ಜಾರಿಗೆ ತರುವಂತೆ ಸಂಬಂಧಪಟ್ಟವರನ್ನು ಒತ್ತಾಯಿಸಲಾಯಿತು.

ಮಾಲಕರ ಅಪಪ್ರಚಾರಕ್ಕೆ ಬಲಿಬೀಳದೆ ಎಲ್ಲಾ ಪಕ್ಷ, ಪಂಗಡಗಳ ಮತ್ತು ವಿದ್ಯಾರ್ಥಿ ಪ್ರತಿನಿಧಿ ಸಭೆ ಕರೆದು ನ್ಯಾಯವನ್ನು ಪರಿಶೀಲಿಸಬೇಕೆಂದು ಜಿಲ್ಲಾಧಿಕಾರಿಯವರನ್ನೂ ಸಾರಿಗೆ ಅಧಿಕಾರಿಗಳನ್ನೂ ವಿನಂತಿಸಲಾಗಿದೆ.

ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ನಡೆಸಿ ಬಸ್ಸು ಮಾಲಕರ ಸುಲಿಗೆಯನ್ನು ಪ್ರೋತ್ಸಾಹಿಸಿದ ಅಧಿಕಾರಿಗಳ ನೀತಿಯನ್ನು ತೀವ್ರವಾಗಿ ಖಂಡಿಸಲಾಯಿತು. ಬಸ್ಸು ಮಾಲಕರ ಅಪಪ್ರಚಾರಗಳಿಗೆ ಬಲಿಯಾಗದೆ ಬಡ ವಿದ್ಯಾರ್ಥಿಗಳಿಗೆ ನ್ಯಾಯ ದೊರೆಯುವಂತೆ ಎಲ್ಲಾ ರಾಜಕೀಯ ಪಕ್ಷಗಳು ವಿದ್ಯಾರ್ಥಿಗಳಿಗೆ ಬೆಂಬಲ ನೀಡಲು ಮುಂದಾಗಬೇಕೆಂದು ಇತರ ಪಕ್ಷ ಪಂಗಡಗಳನ್ನು ಒತ್ತಾಯಿಸಲಾಯಿತು. ○

'ಭೂಸುಧಾರಣೆಯ ಕಾರಣ ಪುರುಷರು ತೆಲಂಗಾಣದ ಧೀರ ರೈತರು'

—ಎನ್. ಎಲ್. ಉಪಾಧ್ಯಾಯ

[ನಮ್ಮ ವರದಿಗಾರರಿಂದ]

'ಇಂದು ದೇಶದಾದ್ಯಂತ ಅರೆ ಮನಸ್ಸಿಂದ ಜಾರಿಗೊಳಿಸಲಾಗುತ್ತಿರುವ ಚೂರುಪಾರು ಭೂಸುಧಾರಣೆಯ ಕಾರಣ ಪುರುಷರು ಕಾಂಗ್ರೆಸ್ಸಿಗರೂ ಅಲ್ಲ, ಜನತಾದವರೂ ಅಲ್ಲ. 1948 ರಲ್ಲೇ, ಭೂಮಿಗಾಗಿ ಶಸಸ್ತ್ರ ಹೋರಾಟ ಮಾಡಿದ ತೆಲಂಗಾಣದ ಧೀರ ರೈತರು ಇಂದಿನ ಭೂಸುಧಾರಣೆಯ ಕಾರಣ ಪುರುಷರು'. ಹೀಗೆಂದವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಕಾಂ. ಎನ್. ಎಲ್. ಉಪಾಧ್ಯಾಯ ಅವರು.

ಕೋಲಾರಜಿಲ್ಲಾ 6ನೇರೈತಸಮ್ಮೇಳನವನ್ನು ಕಳೆದ ಭಾನುವಾರ ಶಿಡ್ಲಘಟ್ಟದಲ್ಲಿ ಉದ್ಘಾಟಿಸಿ ಕಾಂ. ಎನ್. ಎಲ್. ಮಾತನಾಡುತ್ತಿದ್ದರು. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ 1948ರಿಂದ 52 ರವರೆಗೆ ರೈತಸಂಘವು ಉಳುವವನಿಗೇ ಭೂಮಿ ದೊರಕಿಸಲು ನಡೆಸಿದ ಶಸಸ್ತ್ರ ಹೋರಾಟವು ದೇಶದಲ್ಲಿ ಭೂಸುಧಾರಣೆ ಕಾನೂನುಗಳಾಗಲು ಕಾರಣವಾಯಿತು ಎಂದರು ಎನ್. ಎಲ್. ಕೇವಲ ಕಾನೂನುಗಳನ್ನು ಮಾತ್ರ ಮಾಡಿದ ಕಾಂಗ್ರೆಸ್ ಸರ್ಕಾರಗಳು ಅವನ್ನು ಜಾರಿಗೊಳಿಸಲಿಲ್ಲ ಎಂದು ನುಡಿದ ಉಪಾಧ್ಯಾಯರು, ಭೂಸುಧಾರಣೆಯನ್ನು ಜಾರಿಗೊಳಿಸಲು ಹೊರಟ ಕಮ್ಯುನಿಸ್ಟ್ ಪಕ್ಷಗಳ ನೇತೃತ್ವದ ಎರಡು ಸರ್ಕಾರಗಳನ್ನು (ಕೇರಳ — ಬಂಗಾಳ) ಕೇಂದ್ರದ ಕಾಂಗ್ರೆಸ್ ಸರ್ಕಾರ ವಜಾ ಮಾಡಿತು ಎಂದರು. ಜಮೀನ್ದಾರರ ಪರವಾದ ಕಾಂಗ್ರೆಸ್ಸಿಗರ ವರ್ಗಗುಣವೇ ಇದಕ್ಕೆ ಕಾರಣವೆಂದು ಅವರು ಹೇಳಿದರು. ಭೂಸುಧಾರಣಾ ಕಾನೂನು ಜಾರಿಗಾಗಿ ಸರ್ಕಾರದ ಕ್ರಮಗಳಿಗೆ ಕಾಯ್ದು ಪ್ರಯೋಜನವಿಲ್ಲವೆಂದು ಸ್ಪಷ್ಟವಾಗಿ ಹೇಳಿದ ಮಾರ್ಕ್ಸಿಸ್ಟ್ ಮುಖಂಡರು, ರೈತ ಸಂಘಟನೆಯನ್ನು ಬಲಗೊಳಿಸಿ ಭೂಮಿಗಾಗಿ ಹೋರಾಡಿ ಎಂದು ಕರೆ ಕೊಟ್ಟರು.

ರೈತ ಚಳುವಳಿಯ ಇತಿಹಾಸ ಕೋಲಾರ ಜಿಲ್ಲೆಗಿದೆ, ಅನುಭವಿ ಹೋರಾಟಗಾರರ ಮಾರ್ಗದರ್ಶನವೂ ನಿಮ್ಮ ಜಿಲ್ಲೆಗಿದೆ. ಈ ಎರಡು ಅಂಶಗಳನ್ನು ಉಪಯೋಗಿಸಿಕೊಂಡು ಇಡೀ ಕರ್ನಾಟಕ ರಾಜ್ಯಕ್ಕೇ ಆದರ್ಶಪ್ರಾಯವಾದ ರೈತ ಸಂಘಟನೆಯನ್ನು ಕಟ್ಟಿ ಎಂದು ಹುರಿದುಂಬಿಸಿದರು ಕಾಂ. ಎನ್. ಎಲ್.

ರೈತನ ಬೆನ್ನೆಲುಬು ಕೃಷಿ ಕೂಲಿಗಾರ:

ರೈತರ ಬೆನ್ನೆಲುಬಿನಂತಿರುವ ಕೃಷಿ ಕೂಲಿಗಾರರ ಸಂಘಟನೆಯ ಪ್ರಶ್ನೆಯನ್ನು ಅತ್ಯಂತ ಮಹತ್ವದ್ದೆಂದು ರೈತ ಸಂಘ ಪರಿಗಣಿಸಬೇಕು ಎಂದು ಒತ್ತಾಯಿಸಿದ ಉಪಾಧ್ಯಾಯರು, ಬೇಸಾಯ ಕೂಲಿಗಾರರಷ್ಟು ಬಡತನದ ಬದುಕನ್ನು ಈ ದೇಶದಲ್ಲಿ ಇನ್ನಾರು ನಡೆಸುತ್ತಿದ್ದಾರೆ ಎಂದು ಪ್ರಶ್ನಿಸಿದರು. ಬೇಸಾಯ ಕೂಲಿಗಾರರಿಗೆ 8ರೂ.ಗಳ ಕನಿಷ್ಟ ಕೂಲಿ ಕೊಡಿಸುವ ಜವಾಬ್ದಾರಿ ರೈತ ಸಂಘದ್ದು ಎಂದು ಹೇಳಿದರು.

ಉಸ್ತುವಾರಿ ಸರ್ಕಾರ:

ಇಂದಿನ ರಾಜಕೀಯ ಪರಿಸ್ಥಿತಿಯನ್ನು ಸೂಚ್ಯವಾಗಿ ಪ್ರಸ್ತಾಪಿಸಿದ ಉಪಾಧ್ಯಾಯರು, ಈಗ ಕೇಂದ್ರದಲ್ಲಿರುವುದು ಉಸ್ತುವಾರಿ ಸರ್ಕಾರ ಎಂದು ಹೇಳಿ ಈ ಉಸ್ತುವಾರಿ ಸರ್ಕಾರದಿಂದ ಜನತೆಯ ಸಮಸ್ಯೆಗಳ ಪರಿಹಾರ ಸಾಧ್ಯವೇ ಇಲ್ಲ ಎಂದರು. ರಾಜ್ಯದಲ್ಲಿನ ಸರ್ಕಾರವೂ ತನ್ನ ಉಳಿವಿಗಾಗಿ ಶತಾಯ ಗತಾಯ ಪ್ರಯತ್ನ ಮಾಡುವುದರಲ್ಲೇ ನಿರತವಾಗಿದೆ. ಇದರಿಂದಲೂ ದುಡಿಯುವ ಜನರ ಸಮಸ್ಯೆಗಳು ಬಗೆಹರಿಯುವು ಎಂದು ಸ್ಪಷ್ಟವಾಗಿ ಸಾರಿದ ಮಾರ್ಕ್ಸ್‌ವಾದಿ ಮುಖಂಡರು, ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿನ ಸುಭದ್ರ ಹಾಗೂ ರೈತ ಕಾರ್ಮಿಕರದ್ದೇ ಆದ ಸರ್ಕಾರಗಳ ಕಡೆ-ಅವುಗಳ ಸಾಧನೆಯ ಕಡೆ ರೈತ ಪ್ರತಿನಿಧಿಗಳ ಗಮನ ಸೆಳೆದರು.

ಸಮ್ಮೇಳನದ ಆರಂಭದಲ್ಲಿ ಕೋಲಾರ ಜಿಲ್ಲೆಯ ರೈತ ಮುಖಂಡ ಕಾಂ. ಜಿ. ಪಾಪಣ್ಣನವರು ಧ್ವಜಾರೋಹಣ ಮಾಡಿದರು.

ಕೋಲಾರ ಜಿಲ್ಲೆಯ ಎಲ್ಲ ತಾಲ್ಲೋಕುಗಳನ್ನೂ ಪ್ರತಿನಿಧಿಸಿದ್ದ 86 ಪ್ರತಿನಿಧಿಗಳು ಮತ್ತು ನಾಲ್ವರು ವೀಕ್ಷಕರು ಎರಡು ದಿನಗಳ ಕಾಲ ಜರುಗಿದ ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಸಂತಾಪ:

ರೈತಕಾರ್ಮಿಕರ ಹಿತಾಸಕ್ತಿಗಳಿಗಾಗಿ ನಿರಂತರ ಹೋರಾಡಿಕೊಂಡು ಬಂದು ನಿಧನ ಹೊಂದಿದ ಶ್ರೇಷ್ಟ ಕ್ರಾಂತಿಕಾರಿಗಳಾದ ಕಾಂ. ಎ. ಕೆ. ಗೋಪಾಲನ್, ಕಾಂ. ಹರೇಕೃಷ್ಣ ಕೋನಾರ್, ಕಾಂ. ಕೃಷ್ಣಶೆಟ್ಟಿ, ಕಾಂ. ಮಾವೋತ್ಸೆತುಂಗ್, ಕಾಂ. ಚೌಎನ್ ಲಾಯ್, ಕಾಂ. ಚುಟೆಯವರಿಗೆ ಸಮ್ಮೇಳನವು ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿತು.

ಭೂಗ್ರಹಣ ಚಳುವಳಿಯಲ್ಲಿ ಪೋಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾದ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕಾಂ. ಗಣೇಶ್ ಪವಾರ್ ಅವರಿಗೂ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ○

ಬಂಡಾಯ ಕಲಾಪ್ರದರ್ಶನ

ಸೆಪ್ಟೆಂಬರ್ 30 ಮತ್ತು ಅಕ್ಟೋಬರ್ 1ರಂದು ಧಾರವಾಡ ಜಿಲ್ಲೆಯ ಬಂಡಾಯ ಸಾಹಿತ್ಯ ಸಮ್ಮೇಳನವು ನಡೆಯಲಿದೆ. ಯಾವುದೇ ಸ್ವರೂಪದ ಶೋಷಣೆಯ ವಿರುದ್ಧ ಪ್ರತಿಭಟಿಸುವ ಬಂಡೇಳುವ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಹೋರಾಟವೇ ಬಂಡಾಯ ಸಂಘಟನೆಯ ಮೂಲಭೂತ ಉದ್ದೇಶ. ಇಂತಹ ಕ್ರಿಯಾತ್ಮಕ ಹೋರಾಟದ ಸ್ವರೂಪವನ್ನು ಪ್ರತಿಬಿಂಬಿಸುವ, ಬದುಕಿನ ವಿವಿಧ ರಂಗಗಳಲ್ಲಿನ ಶೋಷಣೆಗಳನ್ನು ಮನಗಾಣಿಸುವ ವಿಶಿಷ್ಟ ಕಲೆಯನ್ನು ಧಾರವಾಡ ಜಿಲ್ಲೆಯ ಬಂಡಾಯ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರದರ್ಶಿಸಲು ಉದ್ದೇಶಿಸಲಾಗಿದೆ. ಈ 'ಬಂಡಾಯ ಕಲಾ ಪ್ರದರ್ಶನ'ಕ್ಕೆ ಶೋಷಣಾ ವ್ಯವಸ್ಥೆಯ ಕ್ರೌರ್ಯ ದೌರ್ಜನ್ಯಗಳ ಮುಖಗಳನ್ನು ಸನ್ನಿವೇಶಗಳನ್ನು, ಶೋಷಣಾ ಪರಿಸ್ಥಿತಿಗಳ ವಿರುದ್ಧದ ಬಂಡಾಯ ಪ್ರತಿಭಟನೆಗಳನ್ನು ಪ್ರತಿಬಿಂಬಿಸುವಎಲ್ಲಾ ಪ್ರಾಕಾರಗಳ ಕಲಾಕೃತಿಗಳನ್ನು ಪ್ರದರ್ಶನಕ್ಕಾಗಿ ಕಳುಹಿಸಲು ಕಲಾವಿದರನ್ನು ಧಾರವಾಡ ಜಿಲ್ಲಾ ಬಂಡಾಯ ಸಾಹಿತ್ಯ ಸಮ್ಮೇಳನದ ಪ್ರಚಾರ ಮತ್ತು ಪ್ರದರ್ಶನ ಸಮಿತಿಯವರು ಕೇಳಿಕೊಂಡಿದ್ದಾರೆ. ನಿಮ್ಮ ಕಲಾಕೃತಿಗಳನ್ನು—ಪೇಂಟಿಂಗ್, ಸ್ಕೆಚರ್ಸ್, ರೇಖಾ ಚಿತ್ರ, ವ್ಯಂಗ್ಯಚಿತ್ರ ಇತ್ಯಾದಿ ಪ್ರಾಕಾರಗಳು ಪ್ರದರ್ಶನಕ್ಕೆ ಕಳುಹಿಸುವುದರ ಮೂಲಕ ನಿಮ್ಮ ಗೆಳೆಯರಿಂದಲೂ ಪಡೆದು ಕಳುಹಿಸುವುದರ ಮೂಲಕ ಈ ಸಾಂಸ್ಕೃತಿಕ ಹೋರಾಟದಲ್ಲಿ ಭಾಗಿಯಾಗಲು ಕೋರಿದ್ದಾರೆ.

ಕಲಾಕೃತಿಗಳನ್ನು ಸ್ವತಃ ನೀವಾಗಲೀ ಅಥವಾ ನಿಮ್ಮಗೆಳೆಯರ ಪರಿಚಯಸ್ಥರ ಮೂಲಕವಾಗಲೀ ಅಥವಾ ಅಂಚೆಯ ಮೂಲಕವಾಗಲಿ ದಿನಾಂಕ 25-9-79 ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಯಡೂರು ಮಹಾಬಲ
ಜೋಳ ಸಂಶೋಧನ ವಿಭಾಗ
ಕೃಷಿ ಮಹಾ ವಿದ್ಯಾಲಯ
ಧಾರವಾಡ-580 005

○

ಕಾಲೇಜು ವಿದ್ಯಾರ್ಥಿ ಸಂಘಕ್ಕೆ ಎಸ್.ಎಫ್.ಐ. ಸದಸ್ಯ

ಗುಲ್‌ಬರ್ಗ ನಗರದಲ್ಲಿನ ಶರಣ ಬಸವೇಶ್ವರ ಕಲಾ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ರಾಜ್ಯಸಮಿತಿಯ ಸದಸ್ಯ ಆರ್. ಎಸ್. ನೆಲೋಗಿಕಾರ್ ಅವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡರು ಎಂದು ಗುಲ್ಬರ್ಗ ಜಿಲ್ಲಾ ಎಸ್. ಎಫ್. ಐ. ನ ಪತ್ರಿಕಾ ಪ್ರಕಟಣೆ ತಿಳಿಸಿದೆ. ●

ಆರ್ಥಿಕ ಸಮೀಕ್ಷೆ : (I)

[ನಮ್ಮ ದೇಶವು ಸ್ವಾತಂತ್ರ್ಯಗೊಂಡು 32 ವರುಷಗಳಾಗಿ, ಕಾಂಗ್ರೆಸ್ ಮತ್ತು ಜನತಾ ಸರಕಾರಗಳ ಆಡಳಿತದಲ್ಲಿ ದೇಶದ ಆರ್ಥಿಕ ದುಃಸ್ಥಿತಿಯು ಹೆಚ್ಚುತ್ತಿದ್ದು, ರಾಜಕೀಯ ಅಸ್ಥಿರತೆಯು ತಾಂಡವವಾಡುತ್ತಿರುವ ಈ ಪರ್ವಕಾಲದಲ್ಲಿ, ಆರ್ಥಿಕ ದುಃಸ್ಥಿತಿಯ ಕುರಿತು ತಾತ್ವಿಕ ಹಾಗೂ ಪ್ರತ್ಯಕ್ಷಾನುಭವಗಳ ಹಿನ್ನೆಲೆಯಲ್ಲಿ ನಡೆಸಿದ ಸಮೀಕ್ಷೆಯನ್ನು ನಾಲ್ಕು ಕಂತುಗಳಲ್ಲಿ ನಮ್ಮ ಓದುಗರಿಗಾಗಿ ಪ್ರಕಟಿಸಲು ಸಂತೋಷಪಡುತ್ತೇವೆ. ಸಂ.]

ಸಂಪತ್ ಸಮೃದ್ಧಿಯಲ್ಲಿ ಬಡತನ ದಾರಿದ್ರ್ಯ

—ಆರ್. ಚಂದ್ರ

ನೈಸರ್ಗಿಕ ಸಂಪತ್ತು :

ನಮ್ಮ ದೇಶಕ್ಕೆ 5000 ವರುಷಗಳ ಇತಿಹಾಸವಿದೆ. ದೇಶವು ಉತ್ತರದಿಂದ ದಕ್ಷಿಣಕ್ಕೆ 3216 ಕಿ.ಮೀ. ಉದ್ದಕ್ಕೂ ಮತ್ತು ಪೂರ್ವದಿಂದ ಪಶ್ಚಿಮಕ್ಕೆ 2933 ಕಿ.ಮೀ. ಅಗಲಕ್ಕೂ ಹರಡಿದೆ. ನೆಲಭಾಗದ ಒಟ್ಟು ವಿಸ್ತೀರ್ಣವು 32,80,843 ಚ. ಕಿ. ಮೀ. ಆಗಿದೆ. ಪೂರ್ವ, ಪಶ್ಚಿಮ ಮತ್ತು ದಕ್ಷಿಣದಲ್ಲಿ 6083 ಕಿ.ಮೀ. ಗಳಷ್ಟು ದೀರ್ಘದ ಸಮುದ್ರ ಕರಾವಳಿಯನ್ನು ಹೊಂದಿದೆ. ಉತ್ತರದಲ್ಲಿ 15,200 ಕಿ.ಮೀ. ನಷ್ಟು ಪಾಕಿಸ್ತಾನ, ಬಾಂಗ್ಲಾದೇಶ, ಬರ್ಮಾ, ಚೀನಾ, ನೇಪಾಳ, ಭೂತಾನ ದೇಶಗಳೊಂದಿಗೆ ಭೂಗಡಿಯನ್ನು ಹೊಂದಿದೆ. ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಏಷ್ಯಾ ಮತ್ತು ಆಫ್ರಿಕಾ ದೇಶಗಳ ಮಧ್ಯೆ ಅತ್ಯಂತ ಪ್ರಮುಖ ಸ್ಥಾನದಲ್ಲಿದೆ. ಗಾತ್ರದಲ್ಲಿ ಜಗತ್ತಿನ ರಾಷ್ಟ್ರಗಳಲ್ಲಿ ಏಳನೇ ಸ್ಥಾನಪಡೆದಿದ್ದು, ಭರತಖಂಡ ಎಂಬ ಅದರ ಪ್ರಾಚೀನ ಹೆಸರಿಗನುಗುಣವಾಗಿ ಅದೊಂದು ದೊಡ್ಡ ಉಪ-ಭೂಖಂಡವೇ ಆಗಿದೆ. ದೇಶದ ನೆಲಭಾಗದ ಸುಮಾರು ಅರ್ಧದಷ್ಟು ಪ್ರದೇಶ ವ್ಯವಸಾಯಕ್ಕೆ ಯೋಗ್ಯವಾಗಿದೆ; ಫಲವತ್ತಾದ ನದೀ ಮುಖಜ ಭೂಮಿಗಳಿಂದಲೂ, ಪೀಠ ಭೂಮಿಗಳಿಂದಲೂ ಕೂಡಿದೆ. ದೇಶವು ನೆಲ, ಜಲ, ಕಾಡು, ಖನಿಜ ಮುಂತಾದ ನೈಸರ್ಗಿಕ ಸಂಪನ್ಮೂಲಗಳಿಂದ ಶ್ರೀಮಂತವಾಗಿದೆ. ಆದರೆ, ಅವುಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಬಳಸಿಕೊಳ್ಳಲಾಗುತ್ತಿದೆ. ಉದಾಹರಣೆಗೆ, ನೀರಾವರಿ, ವಿದ್ಯುತ್, ಗಣಿಕೈಗಾರಿಕೆಗಳ ಪ್ರಗತಿಯನ್ನು ಗಮನಿಸಿದರೆ, ನಮ್ಮ ಹಿಂದುಳಿಯುವಿಕೆಯ ಅರಿವು ಆಗುವುದು.

ನೀರಾವರಿ :

ಭಾರತದ ನದಿಗಳು ಪ್ರತೀ ವರುಷವೂ 16,83,000 ಮಿಲಿಯ ಕ್ಯೂ. ಮೀ. ನೀರನ್ನು ಸಾಗಿಸುವುವು. ಆದರೆ, ಈ ಅಮೂಲ್ಯ ಜಲರಾಶಿಯ ಮುಕ್ಕಾಲು ಪಾಲು ಸಮುದ್ರದ ಪಾಲಾಗುವುದು. ಅತಿವೃಷ್ಟಿಯಿಂದ ಅವುಗಳು ತುಂಬಿ ಹರಿಯುವಾಗ ಮತ್ತು ಅನಾವೃಷ್ಟಿಯಿಂದ ಅವುಗಳು ಬರಿದಾಗುವಾಗ ಸಂಭವಿಸುವ ನೆರೆ, ಕ್ಷಾಮ, ಬರಗಾಲಗಳಿಂದ ಅಪಾರ ಪ್ರಾಣಗಳಿಗೆ ಮತ್ತು ಆಸ್ತಿಗಳಿಗೆ ಹಾನಿಯುಂಟಾಗುವುದು. ನೆರೆ ಹಾವಳಿಗಳಿಂದಲೇ ಪ್ರತೀ ವರುಷವೂ ರೂ. 200ಕೋಟಿಗಳಷ್ಟು ನಷ್ಟವಾಗುವುದೆಂದೂ, ನೆರೆ ಪೀಡಿತ ಜನರಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ನೀಡುವ ಪರಿಹಾರವೇ ರೂ. 10 ಕೋಟಿಯಷ್ಟಾಗುವುದೆಂದೂ ಅಂದಾಜು ಮಾಡಲಾಗಿದೆ. ಮಹಾಪೂರ ಚಂಡಮಾರುತಗಳಿಂದ 1976-77 ರ ಒಂದೇ ವರುಷದಲ್ಲಿ ರೂ. 750 ಕೋಟಿಗೂ ಹೆಚ್ಚು ನಷ್ಟವಾದುದಲ್ಲದೆ, ಸಾವಿರಾರು ಜನರು ಸಾವಿಗೀಡಾದರು. ಮುಂದಿನ ವರುಷಗಳಲ್ಲಿಯೂ ಇಂತಹ ನೈಸರ್ಗಿಕ ವಿಕೋಪಗಳಿಂದ ಅಪಾರ ಪ್ರಾಣ ಹಾಗೂ ಸಂಪತ್ತಿನ ಹಾನಿಯಾಗಿದೆ. ನೀರಾವರಿ, ವಿದ್ಯುತ್ ಪೂರೈಕೆ ಮತ್ತು ನೆರೆ ಹಾವಳಿ ತಡೆಯುವ ವಿವಿಧೋದ್ದೇಶಗಳ ಸುಮಾರು 750 ಯೋಜನೆಗಳನ್ನು 1951ರಿಂದ ಕೈಕೊಂಡಿದ್ದರೂ, ಅವುಗಳಲ್ಲಿ 300 ಯೋಜನೆಗಳು ಅಪೂರ್ಣವಾಗಿಯೇ ಉಳಿದಿವೆ. 100ಕ್ಕೂ ಹೆಚ್ಚಿನ ಯೋಜನೆಗಳು ಅಂತರ್-ರಾಜ್ಯ ನದಿ ವಿವಾದಗಳಿಂದಲೇ ಕಾರ್ಯಗತವಾಗದೆ ಉಳಿದಿವೆ. ದೇಶದ ಭೂಭಾಗದ ಮೇಲ್ಮೈಯ ಮತ್ತು ಭೂಗರ್ಭದ ಜಲಸಂಪತ್ತು ಅನುಕ್ರಮವಾಗಿ 67 ಮಿಲಿಯ ಹೆಕ್ಟೇರ್ ಮೀಟರ್ ಮತ್ತು 26.5 ಮಿಲಿಯ ಹೆಕ್ಟೇರ್ ಮೀಟರ್ ಎಂದು ಅಂದಾಜು ಮಾಡಲಾಗಿದೆ. ಇದರಿಂದ ಅನುಕ್ರಮವಾಗಿ 72 ಮಿಲಿಯ ಹೆಕ್ಟೇರ್ ಮತ್ತು 35 ಮಿಲಿಯ ಹೆಕ್ಟೇರ್-ಒಟ್ಟು 107 ಮಿ. ಹೆ. ಭೂಮಿಗೆ ನೀರಾವರಿ ಸೌಕರ್ಯ ಒದಗಿಸುವ ಸಾಧ್ಯತೆ ಇದೆ ಎಂದು ತಿಳಿದಿದೆ. ಆದರೆ, ಸದ್ಯ ನೀರಾವರಿ ಯೋಜನೆಗಳಿಂದ ಕೇವಲ 45.4 ಮಿ. ಹೆ. ಭೂಮಿಗಷ್ಟೇ ಈ ಜಲಸಂಪತ್ತನ್ನು ಬಳಸಬಹುದಾಗಿದೆ. ವಾಸ್ತವವಾಗಿ, ನಿರಾವರಿ ಸೌಕರ್ಯ ಪಡೆಯುವ ವ್ಯವಸಾಯಯೋಗ್ಯ ಭೂಮಿಯು ಕೇವಲ 29 ಮಿ. ಹೆ. ಗಳಷ್ಟೇ ಆಗಿದೆ. ಸುಮಾರು 106 ಮಿ. ಹೆ. ಗಳಷ್ಟು ವ್ಯವಸಾಯಯೋಗ್ಯ ಭೂಮಿ, ಅಂದರೆ ಶೇ. 80 ರಷ್ಟು ನೀರಾವರಿ ಸೌಕರ್ಯವನ್ನು ಹೊಂದಿರುವುದಿಲ್ಲ.

ವಿದ್ಯುತ್‌ಶಕ್ತಿ :

ಜನಜೀವನಕ್ಕೆ ಅತ್ಯಗತ್ಯವಾದ ಶಕ್ತಿಯನ್ನು ಮನುಷ್ಯರ, ಪ್ರಾಣಿಗಳ ಮತ್ತು ಸಸ್ಯಗಳ ವಿಸರ್ಜನೆಗಳಿಂದ ಸಂಚಯಿಸಬಹುದು. ಚೀನಾ ಗಣರಾಜ್ಯದಲ್ಲಿ ಈ ಮೂಲಗಳಿಂದ ಭಾರೀ ಪ್ರಮಾಣದಲ್ಲಿ ಶಕ್ತಿಯನ್ನು ದಿನಬಳಕೆಗೆ ಪಡೆಯಲಾಗುವುದು. ತೈಲ, ಕಲ್ಲಿದ್ದಲು ಮತ್ತು ಅವುಗಳಿಂದ ಪಡೆಯಬಹುದಾದ ವಿದ್ಯುತ್, ಜಲವಿದ್ಯುತ್ ಇವುಗಳು ಆಧುನಿಕ ಶಕ್ತಿ ಸಂಚಯದ ಮೂಲಗಳು. ವಿಜ್ಞಾನದ ಮುನ್ನಡೆಯಿಂದಾಗಿ ಅಣುಶಕ್ತಿ ಮತ್ತು ಸೌರಶಕ್ತಿಗಳನ್ನೂ ಬೃಹತ್ ಪ್ರಮಾಣದಲ್ಲಿ ಬಳಸುವ ಸಾಧ್ಯತೆ ಇದೆ. ಭಾರತದಲ್ಲಿ ಸದ್ಯ ಜಲವಿದ್ಯುತ್ ಒಂದೇ ಒಟ್ಟು ವಿದ್ಯುತ್ ಉತ್ಪಾದನೆಯ ಶೇ. 40ರಷ್ಟು ಆಗಿರುವುದು. 1953-60ರ ಅವಧಿಯಲ್ಲಿ ಕೇಂದ್ರ ಜಲ ಮತ್ತು ಶಕ್ತಿ ಆಯೋಗದ (EW & PC) ಅಂದಾಜಿನಂತೆ ದೇಶದ ಒಟ್ಟು ಜಲವಿದ್ಯುತ್ ಸಾಧ್ಯತೆಯು 25.26 ಮಿಲಿಯ K.W. ಆದರೆ, ಈಗಿರುವ ಜಲವಿದ್ಯುತ್‌ಯೋಜನೆಗಳಿಂದ ಕೇವಲ 3.6 ಮಿಲಿಯ kw, ಅಂದರೆ ಶೇ. 14.3 ರಷ್ಟು ಮಾತ್ರ, ವಿದ್ಯುತ್ ಶಕ್ತಿಯನ್ನು ಪಡೆಯಲಾಗುತ್ತಿದೆ. ಈಗ ಕೈಗೊಂಡಿರುವ ಎಲ್ಲಾ ಜಲವಿದ್ಯುತ್ ಯೋಜನೆಗಳು ಸಂಪೂರ್ಣಗೊಂಡರೂ ಇನ್ನೂ 2.52 ಮಿಲಿಯ kw ಹೆಚ್ಚು ಜಲವಿದ್ಯುತ್ತನ್ನು ಪಡೆಯಬಹುದು. ವಿದ್ಯುತ್ ಪೂರೈಕೆಯ ಅಭಾವದಿಂದ, ವಿದ್ಯುತ್ ಕಡಿತದಿಂದ ಯೋಜನೆಗಳು ತುಂಬು ಸಾಮರ್ಥ್ಯದಿಂದ ಕೆಲಸ ಮಾಡದೆ ಅಪಾರ ನಷ್ಟ ಉಂಟಾಗುತ್ತಿದೆ. ಪರಿಣಾಮವಾಗಿ, ಕೈಗಾರಿಕೆಗಳೂ, ಕೃಷಿವ್ಯವಸಾಯಗಳೂ ತುಂಬು ಸಾಮರ್ಥ್ಯದಿಂದ ಉತ್ಪಾದನೆ ಮಾಡಲಾರದಾಗಿವೆ. ಇದರಿಂದಾಗಿ, ಉತ್ಪಾದನೆ, ಉದ್ಯೋಗಗಳಲ್ಲಿ ಭಾರೀ ಕಡಿತ ಉಂಟಾಗುತ್ತಿದೆ. 1975ರಷ್ಟರಲ್ಲಿ ಭಾರತದ ಒಟ್ಟು 5,73,800 ಹಳ್ಳಿಗಳಲ್ಲಿ ಕೇವಲ ಶೇ. 29 5ರಷ್ಟು-1,69,244 ಹಳ್ಳಿಗಳಿಗೆ ವಿದ್ಯುತ್ ಪೂರೈಸಲಾಗಿತ್ತು. 1974ರಲ್ಲಿ ಭಾರತದ ಜನರ ತಲಾ ಸರಾಸರಿ ವಿದ್ಯುತ್ ಬಳಕೆಯು ಕೇವಲ 97 kwh. ಆಗಿದ್ದರೆ, ಸೋವಿಯತ್ ಯೂನಿಯನ್ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ತಲಾ ಸರಾಸರಿ ಅನುಕ್ರಮವಾಗಿ 3830 kwh ಮತ್ತು 9370 kwh ಆಗಿವೆ. ಚೀನಾ ಮತ್ತು ಅನೇಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವಿದ್ಯುತ್ ಮತ್ತು ಇತರ ಶಕ್ತಿಗಳ ಸರಾಸರಿ ಬಳಕೆಯು ನಮ್ಮ ದೇಶಕ್ಕಿಂತ ಗಣನೀಯವಾಗಿ ಹೆಚ್ಚಾಗಿದೆ.

ಖನಿಜಸಂಪತ್ತು :

ಗಣಿಕೈಗಾರಿಕೆಯ ಪ್ರಗತಿಯ ಮಟ್ಟವು ಒಂದು ದೇಶದ ಜನಜೀವನದ ಮಟ್ಟವನ್ನು ಪ್ರತಿಬಿಂಬಿಸುವುದಲ್ಲದೆ, ಪ್ರಪಂಚದಲ್ಲಿ ಆದೇಶದ ಸ್ಥಾನಮಾನವನ್ನು ನಿರ್ಧರಿಸುವುದು. ಭಾರತವು ಪ್ರಬಲವಾಗಿದ್ದ ಕೌಟಿಲ್ಯ ಅಶೋಕರ ಕಾಲದಲ್ಲಿ, ಮುಂದೆ ಮೊಗಲರ ಕಾಲದಲ್ಲಿ, ಅದು ಗಣಿ ಕೈಗಾರಿಕೆಯಲ್ಲಿಯೂ ಅತ್ಯಂತ ಪ್ರಸಿದ್ಧವಾಗಿತ್ತೆಂದು ಇತಿಹಾಸ ದಾಖಲೆಗಳಿವೆ. ಭಾರತದ ಕಲ್ಲಿದ್ದಲು, ಕಬ್ಬಿಣದ ಅದಿರು, ತೈಲ ಮುಂತಾದ ಖನಿಜ ಸಂಪತ್ತುಗಳು ವಿಶ್ವದ ಯಾವ ದೇಶಕ್ಕಿಂತಲೂ ಕಡಿಮೆ ಇಲ್ಲ. ಆದರೆ, ಸಮಕಾಲೀನ ಪರಿಸ್ಥಿತಿಯಲ್ಲಿ ಅದು ಈ ಕ್ಷೇತ್ರದಲ್ಲಿ ಅತ್ಯಂತ ಹಿಂದುಳಿದಿದೆ. ದೇಶದ ರಾಷ್ಟ್ರೀಯ ಆದಾಯದಲ್ಲಿ ಗಣಿ ಕೈಗಾರಿಕೆಗಳ ಉತ್ಪಾದನಾ ಮೌಲ್ಯವು ಶೇ. 1-2ಕ್ಕಿಂತ ಮೀರಲಿಲ್ಲ. 1974 ರಲ್ಲಿ ಭಾರತದ ಕಲ್ಲಿದ್ದಲಿನ ಉತ್ಪಾದನೆಯು 87 ಮಿಲಿಯ ಮೆಟ್ರಿಕ್ ಟನ್. ಅದೇ ವರುಷದಲ್ಲಿ ಇತರ ದೇಶಗಳ ಉತ್ಪಾದನೆ ಹೀಗಿವೆ: ಝೆಕೋಸ್ಲೋವಾಕಿಯಾ : 810 ಮಿ. ಮೆ. ಟ., ಸೋವಿಯತ್ ಯೂನಿಯನ್ : 670 ಮಿ. ಮೆ. ಟ., ಅಮೇರಿಕಾ ಸಂಯುಕ್ತ ಸಂಸ್ಥಾನಗಳು : 553 ಮಿ. ಮೆ. ಟ., ಚೀನಾ ಗಣರಾಜ್ಯ : 445 ಮಿ. ಮೆ. ಟ. 1974ರಲ್ಲಿ ಭಾರತದ ಖನಿಜ ತೈಲ ಉತ್ಪಾದನೆಯು 7.5 ಮಿ. ಮೆ. ಟ. ಆಗಿದ್ದರೆ, ಅದೇ ವರುಷ ಅಮೇರಿಕಾ ಸಂಯುಕ್ತ ಸಂಸ್ಥಾನ, ಸೋವಿಯತ್ ಯೂನಿಯನ್, ಮತ್ತು ಚೀನಾ ಗಣರಾಜ್ಯಗಳ ತೈಲೋತ್ಪಾದನೆಯು ಅನುಕ್ರಮವಾಗಿ 482 ಮಿ. ಮೆ. ಟ., 509 ಮಿ. ಮೆ. ಟ. ಮತ್ತು 62 ಮಿ. ಮೆ. ಟ. ಆಗಿದ್ದವು. ಭಾರತದ ಉಕ್ಕು ಉತ್ಪಾದನೆಯು 10 ಮಿ. ಟ. ಮೀರಲಿಲ್ಲ. ಚೀನಾದ ಉಕ್ಕು ಉತ್ಪಾದನೆಯು ಭಾರತದ ಸುಮಾರು ಮೂರು ಪಾಲಾಗಿದೆ ಎಂದರೆ ಆಶ್ಚರ್ಯವಾಗುವುದು.

ಜನಸಂಪತ್ತು :

ಭಾರತದ ನೈಸರ್ಗಿಕ ಸಂಪತ್ತಿನಷ್ಟೇ ಜನಸಂಪತ್ತು ವಿಪುಲವಾಗಿದೆ. 1971 ರ ಜನಗಣತಿಯಂತೆ, ದೇಶದ ಒಟ್ಟು ಜನಸಂಖ್ಯೆಯು 548 ಮಿಲಿಯವಾಗಿದ್ದು, ಇಂದು 625 ಮಿಲಿಯ ಮೀರಿದೆ. ಚೀನಾದ ಸದ್ಯದ ಜನಸಂಖ್ಯೆಯು 900 ಮಿಲಿಯ ಕ್ಕೂ ಮೀರಿದ್ದು, ಭಾರತವು ಪ್ರಪಂಚದಲ್ಲಿಯೇ ಎರಡನೆಯ ದೊಡ್ಡ ಜನನಿಬಿಡ ದೇಶವಾಗಿದೆ. ನಮ್ಮ ದೇಶದ ಜನಸಂಖ್ಯೆಯು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ. 15 ರಷ್ಟು ಆಗಿದ್ದರೂ, ಅದರ ಆದಾಯವು ಪ್ರಪಂಚದ ಒಟ್ಟು ಆದಾಯದ ಶೇ. 2.4ರಷ್ಟೇ ಆಗಿರುವುದು! ವೈಯಕ್ತಿಕ ವಾರ್ಷಿಕ ಸರಾಸರಿ ಆದಾಯದ ಮಟ್ಟದಲ್ಲಿ ಭಾರತವು ಜಗತ್ತಿನಲ್ಲಿ 104ನೇ ಸ್ಥಾನದಲ್ಲಿದೆ; ಚೀನಾ 84ನೇ ಸ್ಥಾನದಲ್ಲಿದೆ. ಭಾರತದಲ್ಲಿ ಚೀನಕ್ಕಿಂತಲೂ ಹೆಚ್ಚು ವ್ಯವಸಾಯ ಯೋಗ್ಯ ಭೂಮಿ ಇರುವುದಾದರೂ, ಭಾರತದ ಅತ್ಯಧಿಕ ಒಟ್ಟು ಆಹಾರಧಾನ್ಯಗಳ ಉತ್ಪಾದನೆಯು 1977-78ರಲ್ಲಿ 125 ಮಿ. ಟ. ಆದರೆ, ಚೀನಾದಲ್ಲಿ ಅದು 1973 ರಷ್ಟರಲ್ಲಿಯೇ 280 ಮಿ. ಟ. ಮೀರಿತ್ತು. ಭಾರತದ ಜನಸಾಂದ್ರತೆಯು ಪ್ರತಿ ಚದರ ಕಿ.ಮೀ. ಗೆ 178. ಇದು ಜರ್ಮನಿ, ಹೊಲ್ಯಾಂಡ್, ಜಪಾನ್, ಇಂಗ್ಲೆಂಡ್, ಶ್ರೀಲಂಕಾ, ಬಾಂಗ್ಲಾ ದೇಶಗಳಿಗಿಂತ ಕಡಿಮೆಯಾಗಿದೆ. ಭಾರತದಲ್ಲಿ ವೈಯಕ್ತಿಕ ಸರಾಸರಿ ಸಿಗಬಹುದಾದ ವ್ಯವಸಾಯ ಯೋಗ್ಯ ಭೂಮಿಯು ಫ್ರಾನ್ಸ್, ನ್ಯೂಜಿಲೇಂಡ್, ಯುಗೋಸ್ಲೊವಿಯಾ ದೇಶಗಳಿಗಿಂತ ಕಡಿಮೆ ಇಲ್ಲ. ಆದರೂ ವ್ಯವಸಾಯ ಯೋಗ್ಯವಾದ ಭೂಮಿಯು ಹಲವಾರು ಕಾರಣಗಳಿಂದ ಗಣನೀಯ ಪ್ರಮಾಣದಲ್ಲಿ ವ್ಯವಸಾಯಕ್ಕೆ ಉಪಯೋಗಿಸಲಾಗುತ್ತಲೇ ಇಲ್ಲ. ವ್ಯವಸಾಯ ಯೋಗ್ಯ ಭೂಮಿಯಲ್ಲಿ ಶೇ. 80ರಷ್ಟು ಆಹಾರಧಾನ್ಯಗಳಿಗೇ ಬಳಸಲಾಗುತ್ತಿದ್ದು, ಕೈಗಾರಿಕಾ ಕಚ್ಚಾ ವಸ್ತುಗಳನ್ನು ಬೆಳೆಸಲು ಕೇವಲ ಶೇ. 20 ರಷ್ಟು ಭೂಮಿಯನ್ನು ಉಪಯೋಗಿಸಲಾಗುತ್ತಿದೆ.

ನೈಸರ್ಗಿಕ ಸಂಪತ್ತುಗಳು ವಿಪುಲವಾಗಿದ್ದರೂ, ಅವುಗಳನ್ನು ಫಲಪ್ರದವಾಗಿ ಪಡೆಯಲು ಮತ್ತು ಧಾರಾಳವಾಗಿ ಅನುಭೋಗಿಸಲು ಬೇಕಾದಷ್ಟು ಜನಸಂಪತ್ತು ಇದ್ದರೂ, ಮೂರು ದಶಕಗಳ ಆರ್ಥಿಕ ಅಭಿವೃದ್ಧಿಯ ನಂತರವೂ, ದೇಶದ ಜನಜೀವನದಲ್ಲಿ ದಟ್ಟ ದಾರಿದ್ರ್ಯ ಹರಡಿರುವುದನ್ನು ಗಮನಿಸಬಹುದು.

ಬಡತನ ದಾರಿದ್ರ್ಯ :

ದೇಶದ ಬಡತನ, ದಾರಿದ್ರ್ಯಗಳನ್ನು ಪ್ರತ್ಯಕ್ಷ ಪರಾಂಬರಿಸಿದರೇನೇ ಅವುಗಳ ಸರಿಯಾದ ಅರಿವು ಆದೀತು. ಅವುಗಳು ಅಂಕೆಸಂಖ್ಯೆಗಳಿಗೆ ನಿಲುಕಲಾರವು. ಆದರೂ ಜನರ ಆಹಾರ, ಆರೋಗ್ಯ, ವಸತಿ, ಶಿಕ್ಷಣ ಮುಂತಾದ ಜೀವನಾವಶ್ಯಕತೆಗಳಿಗೆ ಕಾಲದೇಶಕ್ಕನುಗುಣವಾಗಿ ಅವರ ಜೀವನ ವೆಚ್ಚದ ಸರಾಸರಿ ಕನಿಷ್ಟ ಮಿತಿಯನ್ನು ನಿಗದಿಮಾಡಿ, ಅದಕ್ಕಿಂತಲೂ ಕಡಿಮೆ ಆದಾಯ ಇರುವವರನ್ನು ಬಡತನ ರೇಖೆಗಿಂತಲೂ ಕೆಳಗಿನ ಮಟ್ಟದಲ್ಲಿರುವವರು ಎಂದು ಇತ್ತೀಚೆಗೆ ಕೆಲವು ತಜ್ಞರು ಅಂದಾಜು ಮಾಡಿದ್ದಾರೆ. ಯೋಜನಾ ಆಯೋಗವು, 1973-74ರ ಧಾರಣೆಗಳಲ್ಲಿ ಪ್ರತಿಯೊಬ್ಬನ ಜೀವನಾವಶ್ಯಕ ಕನಿಷ್ಟ ಮಾಸಿಕ ಸರಾಸರಿ ವೆಚ್ಚವು ಗ್ರಾಮೀಣ ಪ್ರದೇಶಗಳಲ್ಲಿ ರೂ. 53 ಮತ್ತು ನಗರ ಪ್ರದೇಶಗಳಲ್ಲಿ ರೂ. 62 ಎಂದು ನಿಗದಿ ಮಾಡಿ, ಅನುಕ್ರಮವಾಗಿ ಆಪ್ರದೇಶಗಳಲ್ಲಿನ ಶೇ. 60 ಮತ್ತು ಶೇ. 55 ರಷ್ಟು ಜನರು ಈ ಬಡತನದ ಆದಾಯದ ಮಟ್ಟಕ್ಕಿಂತಲೂ ಕೆಳಗಿರುವರು ಎಂದು ಅಂದಾಜು ಮಾಡಿದೆ. ಪ್ರಸಿದ್ಧ ಅರ್ಥ ಶಾಸ್ತ್ರಜ್ಞರಾದ ಡಾಂಡೇಕರ್ ಮತ್ತು ರಾತ್, 1960-61ರ ಧಾರಣೆಗಳಲ್ಲಿ ಅಂತಹ ಕನಿಷ್ಟ ವೆಚ್ಚವು ಗ್ರಾಮೀಣ ಪ್ರದೇಶಗಳಲ್ಲಿ ರೂ. 15 ಮತ್ತು ನಗರ ಪ್ರದೇಶಗಳಲ್ಲಿ ರೂ.

[6ನೇ ಪುಟ ನೋಡಿ]

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅನುಸರಿಸಿದ ಕಾರ್ಯನೀತಿಯ ಬಗ್ಗೆ

ಕಳೆದ ಹದಿನೈದು ವರ್ಷಗಳಲ್ಲಿ ವಿವಿಧ ಘಟನೆಗಳ ತಿರುವುಗಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅನುಸರಿಸಿದ ಕಾರ್ಯನೀತಿಯು ಒಂದಲ್ಲ ಒಂದು ವಿಧದ ಟೀಕೆಗೆ ಗುರಿಯಾಗಿದೆ. ಕಾರ್ಯನೀತಿ ಎಂದು ಹೇಳುವಾಗ ಅದನ್ನು ಪೂರ್ಣವಾಗಿ ನಾವು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಅರ್ಥದಲ್ಲಿ ಬಳಸುತ್ತೇವೆಯೇ ಹೊರತು, ಹಲವರು ಮಾಡುವ ಹಾಗೆ ಅದರ ಅರ್ಥ ಕೆಡಿಸಿ, ಕುತಂತ್ರ ಎನ್ನುವ ಅರ್ಥದಲ್ಲಿ ಅಥವಾ ತಕ್ಷಣದ ಅಗತ್ಯಗಳನ್ನು ಪೂರೈಸಿಕೊಳ್ಳುವ ಉಪಾಯ ಎನ್ನುವ ಅರ್ಥದಲ್ಲಿ ಬಳಸುವುದಿಲ್ಲ. ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳಾದ ನಮಗೆ, ಕಾರ್ಯನೀತಿ ಎಂದರೆ, ಕ್ರಾಂತಿಕಾರಿ ದುಡಿಮೆಗಾರ ವರ್ಗದ ಪಕ್ಷದ ರಾಜಕೀಯ ವರ್ತನೆ, ಎಂದರೆ ನಿಯಮಗಳನ್ನು ಆಧರಿಸಿದ ಪಕ್ಷದ ನೀತಿ ಎಂದರ್ಥ.

ಯಾವುದಾದರೊಂದು ಕಮ್ಯುನಿಸ್ಟ್ ಪಕ್ಷದ ಕಾರ್ಯನೀತಿಯು ಪಕ್ಷದ ನಿಯಮಗಳು ಮತ್ತು ಅಂತಿಮ ಗುರಿಗಳ ಮೇಲೆ ಅದು ಬೀರುವ ಪರಿಣಾಮವನ್ನು ಲೆಕ್ಕಿಸದೆ ಕೇವಲ ತಕ್ಷಣದ ಅಗತ್ಯಗಳ ಮೇಲೆ ನಿರ್ಧರಿತವಾದರೆ ಅದು ತೀವ್ರ ಅವಕಾಶವಾದವಾಗುತ್ತದೆ; ಸದ್ಯದ ಕ್ಷಣಿಕ ಲಾಭಗಳಿಗಾಗಿ ಭವಿಷ್ಯವನ್ನು ಬಲಿಗೊಟ್ಟ ಕಾರ್ಯನೀತಿ ಎನ್ನಿಸುತ್ತದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಯಾವುದೆ ರಾಷ್ಟ್ರೀಯ ರಾಜಕೀಯ ಬೆಳವಣಿಗೆಯ ತಿರುವಿನಲ್ಲಿ ಕೈಗೊಂಡಿರುವ ಕಾರ್ಯನೀತಿಯು, ಅವಕಾಶವಾದಿಯಾಗಿದೆಯೇ ಅಥವಾ ಭದ್ರವಾದ ನಿಯಮಗಳ ಆಧಾರ ಅದಕ್ಕಿದೆಯೇ ಎಂಬುದನ್ನು ಟೀಕಾಕಾರರು ಪರೀಕ್ಷೆ ಮಾಡಿಯೇ ಇಲ್ಲ ಎನ್ನುವುದು ವಿಷಾದನೀಯ.

1920ರ ವೇಳೆಗೇ ಆರಂಭವಾದರೂ ಭಾರತೀಯ ಕಮ್ಯುನಿಸ್ಟ್ ಚಳುವಳಿಯು ಇನ್ನೂ ದುರ್ಬಲವಾಗಿಯೇ ಉಳಿದಿದೆ ಎನ್ನುವುದನ್ನು ಮೊದಲೇ ಹೇಳಿಬಿಡಬೇಕು. ಲೆನಿನ್ ಹೇಳಿರುವ ಹಾಗೆ, "ತನ್ನ ಕಾರ್ಯಕ್ರಮ ಮತ್ತು ಕಾರ್ಯನೀತಿಗಳು ಸರಿಯಾಗಿವೆ ಎಂಬುದನ್ನು ಬಹುಸಂಖ್ಯಾತ ಜನತೆಗೆ ಮನದಟ್ಟು ಮಾಡಿಕೊಡುವುದು ಪ್ರತಿಯೊಂದು ಪಕ್ಷದ ಮೊದಲನೇ ಕರ್ತವ್ಯ." ಈ ಕರ್ತವ್ಯ ಈಡೇರಿಸಿದ ಮೇಲೆ ಮುಂದಿನ ಕೆಲಸ ರಾಜ್ಯಾಧಿಕಾರವನ್ನು ಪಡೆಯುವುದು. ನಮ್ಮ ದೇಶದ ಬಹುಸಂಖ್ಯಾತ ಜನತೆಯನ್ನಿರಲಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು "ತನ್ನ ಕಾರ್ಯಕ್ರಮ ಮತ್ತು ಕಾರ್ಯನೀತಿಗಳು ಸರಿಯಾಗಿವೆ" ಎಂದು ಬಹುಸಂಖ್ಯಾತ ಕಾರ್ಮಿಕವರ್ಗವನ್ನೇ ಇನ್ನೂ ತೃಪ್ತಿಗೊಳಿಸಬೇಕಾಗಿದೆ. ತನ್ನ ಕಾರ್ಯಕ್ರಮ ಮತ್ತು ಕಾರ್ಯನೀತಿಗಳು ಸರಿಯಾಗಿವೆ ಎಂದು ಜನತೆಗೆ ಮನದಟ್ಟು ಮಾಡಿಕೊಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೋರಾಡುತ್ತಿದೆ.

ಲೋಕಸಭೆಯ ವಿಸರ್ಜನೆ ಮತ್ತು ಮಧ್ಯಾವಧಿ ಚುನಾವಣೆಗೆ ದಾರಿಮಾಡಿದ ಸದ್ಯದ ಸರ್ಕಾರಿ ಬಿಕ್ಕಟ್ಟಿನ ಸಮಯದಲ್ಲಿ ನಾವು ಅನುಸರಿಸಿದ ಕಾರ್ಯನೀತಿಯ ಬಗ್ಗೆ ಹಿಂದೆ ವಿವರಿಸಿದ್ದೆವು. ಹಿಂದೆ ಒಗ್ಗೂಡಿದ್ದ ಕಮ್ಯುನಿಸ್ಟ್ ಪಕ್ಷದಿಂದ ಬೇರೆಯಾದ ಮೇಲೆ ಕಳೆದ ಹದಿನೈದು ವರ್ಷಗಳಲ್ಲಿ ನಮ್ಮ ಪಕ್ಷ ಅನುಸರಿಸಿದ ಕಾರ್ಯನೀತಿಯ ಪಕ್ಷಿನೋಟವನ್ನು ಈಗ ಕೊಡಲು ಪ್ರಯತ್ನಿಸುತ್ತೇವೆ.

1950ರ ಉತ್ತರಾರ್ಧದಲ್ಲಿ ಆಗ ಒಗ್ಗೂಡಿದ್ದ ಕಮ್ಯುನಿಸ್ಟ್ ಪಕ್ಷದೊಳಗೆ, ಅನೇಕ ಕಾರ್ಯಕ್ರಮಾತ್ಮಕ ಮತ್ತು ನೀತಿ ವಿಚಾರಗಳ ಬಗ್ಗೆ ಮತಭೇದ ತಲೆದೋರಿತು. ಆಡಳಿತ ಮಾಡುತ್ತಿರುವ ಕಾಂಗ್ರೆಸ್ ಪಕ್ಷ ಮತ್ತು ಅದರ ಸರ್ಕಾರದ ಬಗ್ಗೆ ತಳೆಯಬೇಕಾದ ರಾಜಕೀಯ ಧೋರಣೆಯ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು ಬಂದವು. ಆಡಳಿತ ಪಕ್ಷ ಮತ್ತು ಅದರ ಸರ್ಕಾರವು ಅಧಿಕಾರದ ಏಕಸ್ವಾಮ್ಯವನ್ನು ಪಡೆಯದಂತೆ ಮಾಡುವ ಬಗ್ಗೆ ಗಮನ ಹರಿಸಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಶೀಘ್ರವಾಗಿ ಬೆಳೆಯುವುದರ ಬಗ್ಗೆ ನಾವು ದೃಷ್ಟಿ ಹರಿಸಿದರೆ, ಇತರರು ಉಗ್ರಬಲವಾದಿ ಶಕ್ತಿಗಳ ಬಗ್ಗೆ ಗಮನ ಕೇಂದ್ರೀಕರಿಸಬೇಕು ಅಥವಾ ಉಗ್ರಬಲವಾದಿಗಳು ಮತ್ತು ಆಡಳಿತ ಮಾಡುತ್ತಿರುವ ಕಾಂಗ್ರೆಸ್ ಪಕ್ಷಗಳೆರಡರ ಮೇಲೆ ಏಕಕಾಲಕ್ಕೆ ಹೋರಾಟ ನಡೆಸಬೇಕು ಎಂಬ ಕಾರ್ಯನೀತಿಯನ್ನು ಅನುಮೋದಿಸಿದರು.

ಈ ಎರಡು ವಿಭಿನ್ನ ಕಾರ್ಯನೀತಿಗಳ ನಡುವೆ ತೀವ್ರ ಹೋರಾಟ ಬಂದದ್ದರಿಂದ ಒಡಕು ಅನಿವಾರ್ಯವಾಯಿತು. ನಾವು, ಕಾಂಗ್ರೆಸ್ ಪಕ್ಷದ ಬಗ್ಗೆಯೇ ಗಮನ ಕೇಂದ್ರೀಕರಿಸಿ, ಪ್ರಗತಿ ಮತ್ತು ಕ್ರಾಂತಿಯ ಮುಖ್ಯ ವಿರೋಧಿ ಅದೇ ಎಂದು ಭಾವಿಸಿದರೆ, ನಮ್ಮ ವಿರೋಧಿಗಳು ಉಗ್ರಬಲವಾದಿಗಳ ಮೇಲೆ ಗಮನ ಕೇಂದ್ರೀಕರಿಸಿ, ಬಲವಾದಿ ಶಕ್ತಿಗಳ ವಿರುದ್ಧ ಹೋರಾಡುವ ನೆವದಲ್ಲಿ ಕಾಂಗ್ರೆಸ್‌ನ ಜೊತೆ ಸಹಕರಿಸಲು ಆರಂಭಿಸಿದರು.

ಕಾಂಗ್ರೆಸ್ ಸ್ನೇಹದ ಮಾರ್ಗ :

ನಮ್ಮ ಕಾರ್ಯನೀತಿಯನ್ನು ಅವರು "ಅಂಧ ಕಾಂಗ್ರೆಸ್ ವಿರೋಧ" ಎಂದು ಹೇಳಿ ತಮ್ಮದನ್ನು ಸೃಷ್ಟಿಶೀಲ ಮಾರ್ಕ್ಸ್‌ವಾದ ಎಂದು ವರ್ಣಿಸಿಕೊಂಡರು! ಆದರೆ ಜೀವನ ಮತ್ತು ಘಟನೆಗಳು ಹೇಗೆ ಸಾಬೀತುಗೊಳಿಸಿದುವೆಂದರೆ, ನಮ್ಮ ವಿರೋಧಿಗಳ ಕಾರ್ಯನೀತಿ ಕೊನೆಗೆ, ಕಾಂಗ್ರೆಸ್ ಸರಕಾರದೊಂದಿಗೆ ಸಹಯೋಗ ಮಾಡುವ ಮತ್ತು ಅದನ್ನು ರಾಷ್ಟ್ರೀಯ ಬೂರ್ಜ್ವಾ ಸರ್ಕಾರವೆಂದು ಕರೆದು ಇತರ ಕಾಂಗ್ರೆಸ್ ವಿರೋಧಿ ಪಕ್ಷಗಳನ್ನು ಬಲಪ್ರತಿಗಾಮಿ ಎಂದು ಇಲ್ಲವೆ ಎಡ-ಗುಂಪುವಾದಿ ಎಂದು ಖಂಡಿಸುವ ವಿನಾಶಕಾರಿ ಮಾರ್ಗವನ್ನು ಹಿಡಿಯಿತು.

ಚರಿತ್ರೆ ಸಾಬೀತುಗೊಳಿಸಿದ ಹಾಗೆ, 1967ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಧಿಕಾರ ಏಕಸ್ವಾಮ್ಯಕ್ಕೆ ಬಲವಾದ ಪೆಟ್ಟು ಬಿದ್ದಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎತ್ತಿ ಹೇಳಿದ್ದು ಇದನ್ನೇ. ಎಂಟು ರಾಜ್ಯ ಸರ್ಕಾರಗಳು ಕಾಂಗ್ರೆಸ್ಸಿನ ಹಿಡಿತದಿಂದ ಹೊರ ಬಂದುದಲ್ಲದೆ, ಲೋಕಸಭೆಯಲ್ಲಿ ಕಾಂಗ್ರೆಸ್ ಬಹುಮತ ವಿಪರೀತವಾಗಿ ಇಳಿಯಿತು. ಆ ಕಮ್ಯುನಿಸ್ಟ್ ಪಕ್ಷ ಅನುಸರಿಸಿದ್ದ ಕಾರ್ಯನೀತಿ ದಿವಾಳಿಯಾಯಿತು. ನಂತರ ಕಮ್ಯುನಿಸ್ಟ್ ಪಕ್ಷದ ನಾಯಕರು ತಮ್ಮ ಕಾರ್ಯನೀತಿಯನ್ನು ಬದಲಾಯಿಸಿ, ಕಾಂಗ್ರೆಸ್ ವಿರೋಧಿ ಮೈತ್ರಿಗಳನ್ನು ಬೆಳೆಸಿ, ಉಗ್ರಬಲವಾದಿ ಪಕ್ಷಗಳಾದ ಜನಸಂಘ, ಸ್ವತಂತ್ರಪಕ್ಷ ಮುಂತಾದುವುಗಳ ಜೊತೆ ರಾಜ್ಯಸರ್ಕಾರಗಳಲ್ಲಿ ಸೇರಿದರು.

ಎಂ. ಬಸವಪುನ್ನಯ್ಯ

"ಅಂಧ ಕಾಂಗ್ರೆಸ್ ವಿರೋಧ" ಕಾರ್ಯನೀತಿಯನ್ನು ಹೊಂದಿದೆ ಎಂದು ಖಂಡಿಸಲಾಗಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು, ಬಲವಾದಿ ಪಕ್ಷಗಳೇ ಹೆಚ್ಚಾಗಿದ್ದು ಎಡಶಕ್ತಿಗಳು ಇಲ್ಲದಿದ್ದ ಯಾವುದೇ ಸರ್ಕಾರದಲ್ಲಿ ಭಾಗವಹಿಸಲು ನಿರಾಕರಿಸಿತು. ಈ ಎರಡು ಕಾರ್ಯನೀತಿಗಳಲ್ಲಿ ಯಾವುದು ಮಾರ್ಕ್ಸ್‌ವಾದಿಯಾದದ್ದು ಮತ್ತು ನಿಯಮವುಳ್ಳದ್ದು, ಯಾವುದು ನಿಯಮರಹಿತವಾದದ್ದು ಮತ್ತು ಅವಕಾಶವಾದಿಯಾದದ್ದು ಎಂಬುದನ್ನು ಬುದ್ಧಿವಂತರು ಮತ್ತು ಪೂರ್ವಗ್ರಹಪೀಡಿತರಲ್ಲದವರು ನಿರ್ಧರಿಸಬೇಕು.

ಕಾಂಗ್ರೆಸ್ ಒಡಕಿನ ಬಗ್ಗೆ ದೃಷ್ಟಿಕೋನ :

ನಂತರ 1969ರ ಮಧ್ಯದ ಬೆಳವಣಿಗೆಗಳು ನಡೆದು, ಆಳುವ ಕಾಂಗ್ರೆಸ್ ಪಕ್ಷವು "ಇಂಡಿಕೇಟ್" ಮತ್ತು "ಸಿಂಡಿಕೇಟ್" ಎಂದು ವ್ಯಂಗ್ಯವಾಗಿ ಕರೆದ ಹಾಗೆ ಎರಡಾಗಿ ಒಡೆಯಿತು. ಮೊದಲನೆಯದು ಇಂದಿರಾಗಾಂಧಿಯವರ ಗುಂಪನ್ನು ಹೇಳಿದರೆ ಎರಡನೆಯದರಲ್ಲಿ ಮೊರಾರ್ಜಿದೇಸಾಯಿ, ನಿಜಲಿಂಗಪ್ಪ, ಕಾಮರಾಜ ನಾಡಾರ್ ಮೊದಲಾದವರಿದ್ದರು. ಈ ಎರಡು ಗುಂಪುಗಳ ನಡುವಿನ ಹೋರಾಟದಲ್ಲಿ ಇಂದಿರಾಗಾಂಧಿ ಗುಂಪಿನವರು ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ದತಿ ಭೂಸುಧಾರಣೆಯ ಭರವಸೆಗಳು ಮುಂತಾದ ಕಾರ್ಯಕ್ರಮವನ್ನು ಮುಂದಿಟ್ಟರೆ, ಸಿಂಡಿಕೇಟ್ ಗುಂಪಿನವರು ಇಂದಿರಾಗಾಂಧಿಯ ಈ ಎಲ್ಲ ಘೋಷಣೆಗಳನ್ನು ವಿರೋಧಿಸಿ, ತೀವ್ರ ಬಲಪಂಥೀಯ ವೇದಿಕೆಯಲ್ಲಿ ನಿಂತರು.

ಬಲಪಂಥೀಯ ಶಕ್ತಿಗಳ ಕಾರ್ಯಕ್ರಮದಲ್ಲಿ ಹೊಸತು ಅಥವಾ ಆಶ್ಚರ್ಯಕರವಾದುದೇನೂ ಇರಲಿಲ್ಲ. ಇಂದಿರಾಗಾಂಧಿ ಸರ್ಕಾರದ ಮೂಲಭೂತ ನೀತಿಗಳಲ್ಲಿ ಯಾವುದೇ ಬದಲಾವಣೆಯೂ ಇರಲಿಲ್ಲ. ಆ ಪರಿಸ್ಥಿತಿಯಲ್ಲಿ ಹೊಸತಾದುದೆಂದರೆ ಗಣರಾಜ್ಯದ ಅಧ್ಯಕ್ಷ ಪದವಿಯನ್ನು ಪಡೆಯುತ್ತೇವೆಂದು ಸಿಂಡಿಕೇಟ್‌ನವರು ಹಾಕಿದ್ದ ಸವಾಲು. ಆ ಪರಿಸ್ಥಿತಿಯ ಅವಕಾಶಗಳನ್ನು ಉಪಯೋಗಿಸಿಕೊಂಡು ಸರ್ಕಾರಿ ನೀತಿಗಳನ್ನು ಮತ್ತಷ್ಟು ಬಲಪಂಥದೆಡೆಗೆ ಕರೆದೊಯ್ಯುವ ಉದ್ದೇಶ ಇಲ್ಲಿತ್ತು. ಒಡೆದ ಆಳುವ ಕಾಂಗ್ರೆಸ್ ಪಕ್ಷದ ಎರಡೂ ಗುಂಪಿನವರು, ಇಬ್ಬರನ್ನು ನಿಲ್ಲಿಸಿ, ವಿರೋಧಿ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ಮುಂದಿಟ್ಟು ಮತದಾರರನ್ನು ಸೆಳೆಯಲು ಯತ್ನಿಸುತ್ತಿದ್ದುದೂ ಇದರಲ್ಲಿ ಹೊಸತಾಗಿತ್ತು.

ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷದ ಬಗ್ಗೆ ತನ್ನ ಗಮನವನ್ನು ಕೇಂದ್ರೀಕರಿಸಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು, ಹೊಸದಾಗಿ ಬೆಳವಣಿಗೆಯಾದ ರಾಜಕೀಯ ಸ್ಥಿತಿಗತಿಗಳಿಗೆ ತಕ್ಕಹಾಗೆ ತನ್ನ ರಾಜಕೀಯ ಮತ್ತು ಕಾರ್ಯನೀತಿ ದೃಷ್ಟಿಕೋನವನ್ನು ಅನುಸರಿಸಲು ಕರೆಕೊಟ್ಟಿತು. ಅದು ಆ ಸಮಯಕ್ಕೆ ತಕ್ಕಹಾಗೆ ವರ್ತಿಸಿ, ಹೊಸ ಕಾರ್ಯನೀತಿಯನ್ನು ಅನುಸರಿಸಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು "ಅಂಧ ಕಾಂಗ್ರೆಸ್ ವಿರೋಧಿ" ಎಂದು ತೆಗಳುತ್ತಿದ್ದ ಟೀಕಾಕಾರರ ನಿರೀಕ್ಷೆಗೆ ವಿರುದ್ಧವಾಗಿ, ಮಾರ್ಕ್ಸ್‌ವಾದಿ ಪಕ್ಷವು ಸಿಂಡಿಕೇಟನ್ನು, ಅದರ ರಾಜಕೀಯ ವೇದಿಕೆಯನ್ನು ಮತ್ತು ರಾಷ್ಟ್ರಪತಿ ಸ್ಥಾನದ ಅದರ ಅಭ್ಯರ್ಥಿಯಾಗಿದ್ದ ಶ್ರೀ ಸಂಜೀವರೆಡ್ಡಿಯವರನ್ನು ತೀವ್ರವಾಗಿ ವಿರೋಧಿಸಿತು. ರಾಷ್ಟ್ರಪತಿ ಚುನಾವಣೆಯಲ್ಲಿ ಮತದಾನ ಒಡೆದದ್ದರಿಂದ ಮತ್ತು "ಇಂಡಿಕೇಟ್"ನ ಅಭ್ಯರ್ಥಿ ಶ್ರೀ ವಿ. ವಿ. ಗಿರಿಯವರು ಗೆದ್ದದ್ದರಿಂದ ಕಾಂಗ್ರೆಸ್ಸಿನಲ್ಲಿ ಮೇಲಿನಿಂದ ಕೆಳಗಿನವರೆಗೂ ಒಡಕುಂಟಾಗಿ, ದೇಶದ ಆಡಳಿತದಲ್ಲಿದ್ದ ಕಾಂಗ್ರೆಸ್ ಏಕಸ್ವಾಮ್ಯವನ್ನು ತುಂಬಾ ಕಡಿಮೆ ಮಾಡಿತು.

ಮರೆತ ಮುಖ್ಯ ಸಂಗತಿಗಳು :

ಆದರೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಈ ಕಾರ್ಯನೀತಿಯು ಕೂಡ ನಮ್ಮ ಹಿತೈಷಿಗಳು ಮತ್ತು ವಿರೋಧಿಗಳಿಬ್ಬರಿಂದಲೂ ಉಗ್ರ ಟೀಕೆಗೆ ಗುರಿಯಾಯಿತು. ಇಂದಿರಾಗಾಂಧಿ ಕಾಂಗ್ರೆಸ್‌ನ ಅಭ್ಯರ್ಥಿಗೆ ಮತದಾನ ಮಾಡಿರುವುದರಿಂದ, ಇಂದಿರಾಗಾಂಧಿ ಮತ್ತವರ ಸರ್ಕಾರದ ಕೈಬಲವಾಗಿ ಯಾರ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮೊದಲಿಂದ ವಿರೋಧ ಕೇಂದ್ರೀಕರಿಸಿತ್ತೋ ಅವರೇ ಬಲವಾದ ಹಾಗಾಯಿತು ಎಂದು ನಮ್ಮ ಹಿತೈಷಿಗಳು ಹೇಳಿದರು. ನಂತರ ಮುಂದೆ ಇಂದಿರಾ ಗುಂಪು ಸಬಲವಾಗಿ ಅದು ತುರ್ತು ಪರಿಸ್ಥಿತಿ ತರುವಂಥ ಅರೆಫ್ಯಾಸಿಸ್ಟ್ ಆಳಿಕೆಯಾದದ್ದು ಇವೆಲ್ಲದರ "ಮೂಲ ಪಾಪ ಇಂದಿರಾಗಾಂಧಿಯ ರಾಷ್ಟ್ರಪತಿ ಅಭ್ಯರ್ಥಿಯನ್ನು ಬೆಂಬಲಿಸಿದ್ದರಲ್ಲಿ ಇದೆ" ಎಂದು ಹೇಳಲಾಯಿತು.

ಆದರೆ, ಆ ಪರಿಸ್ಥಿತಿಯಲ್ಲಿ ಉದ್ಭವಿಸಿದ್ದ ಎರಡು ಮುಖ್ಯ ಸಂಗತಿಗಳನ್ನು ಈ ಟೀಕಾಕಾರರು ಮರೆಯುತ್ತಾರೆ. ಒಂದು, "ಇಂಡಿಕೇಟ್" ಮತ್ತು "ಸಿಂಡಿಕೇಟ್"ಗಳು ಜನತೆಯ ಮುಂದಿಟ್ಟ ಎರಡು ಕಾರ್ಯಕ್ರಮಗಳು ಮತ್ತು ಎರಡನೆಯದು, ಉಗ್ರಬಲಪಂಥೀಯರು ಮತ್ತು ಅವರ ರಾಜಕೀಯ ವೇದಿಕೆಯವರು ಒಡ್ಡಿದ ಬೆದರಿಕೆ. ಈ ಎರಡು ಸಂಗತಿಗಳನ್ನು ಗಮನಿಸದೆ ಸುಮ್ಮನಿದ್ದಿದ್ದರೆ, ಜನತೆಯ ಕಣ್ಣಿನಲ್ಲಿ ಮಾರ್ಕ್ಸ್‌ವಾದಿ ಪಕ್ಷವು ತನ್ನ ರಾಜಕೀಯ ನಿಲುವಿನಲ್ಲಿ ರಾಜಿಮಾಡಿಕೊಂಡ ಹಾಗೆ ಕಾಣಿಸಿ, ಮಾರ್ಕ್ಸ್‌ವಾದಿ ಪಕ್ಷವು ಉಗ್ರಬಲಪಂಥೀಯರು ಗೆಲ್ಲಲು ಅವಕಾಶ ಮಾಡಿಕೊಟ್ಟರು ಎಂಬ ತೀರ್ಮಾನಕ್ಕೆ ಅವರು ಬಂದಿರುತ್ತಿದ್ದರು.

ರಾಜಕೀಯ ಬೆಳವಣಿಗೆಗಳ ಈ ಘಟ್ಟವು ಎಂಟುಹತ್ತು ತಿಂಗಳ ಅವಧಿಯಲ್ಲಿ ಮುಗಿಯಿತು. ಇಂಡಿಕೇಟ್ ಕಾಂಗ್ರೆಸ್, ಸಿಂಡಿಕೇಟ್ ಅನ್ನು ನಾಶಗೊಳಿಸಿ ಮತ್ತು ಐಕ್ಯ ಎಡರಂಗವನ್ನು ಅದರಲ್ಲೂ ಮುಖ್ಯವಾಗಿ ಮಾರ್ಕ್ಸ್‌ವಾದಿ ಪಕ್ಷದ ಬಗ್ಗೆ ಆರೋಪಗಳನ್ನು ಮಾಡಿ, ತನ್ನನ್ನು ಒಗ್ಗೂಡಿಸಿಕೊಳ್ಳಲು ಆರಂಭಿಸಿತು.

ಕಾಂಗ್ರೆಸ್ ಒಡಕಿನಬಗ್ಗೆ ಕಮ್ಯುನಿಸ್ಟ್ ಪಕ್ಷದ ನಾಯಕರು ಮಾಡಿದ್ದ ಸಂಪೂರ್ಣವಾಗಿ ತಪ್ಪಾಗಿದ್ದ ವಿವರಣೆಯನ್ನು ಉಪಯೋಗಿಸಿಕೊಂಡು, ಇಂದಿರಾಗಾಂಧಿ ಸರ್ಕಾರವು ಆ ಪಕ್ಷದ ಜೊತೆ ಮತ್ತು ಇತರ ಎಡ ಮತ್ತು ಪ್ರಜಾಪ್ರಭುತ್ವವಾದಿ ಗುಂಪುಗಳ ಜೊತೆ ಮೈತ್ರಿ ಬೆಳೆಸಿ, ಕೇರಳದ ಮಾರ್ಕ್ಸ್‌ವಾದಿ ನೇತೃತ್ವದ ಸರ್ಕಾರವನ್ನು ಕೆಳಗಿಳಿಸಿತು. ಕಮ್ಯುನಿಸ್ಟ್ ಪಕ್ಷವನ್ನು ಅಸ್ತ್ರವನ್ನಾಗಿ

ಮಾಡಿಕೊಂಡ ಕಾಂಗ್ರೆಸ್, ಪ. ಬಂಗಾಳದಲ್ಲೂ ಐಕ್ಯರಂಗವನ್ನು ಒಡೆದು ಅಲ್ಲಿ ಅರೆಫ್ಯಾಸಿಸ್ಟ್ ಆಡಳಿತವನ್ನು ತಂದಿತು.

ಉಗ್ರ ಬಲಪಂಥದ ಬೆದರಿಕೆ ಮತ್ತು ಪ್ರಗತಿಗೆ ಮತ್ತು ಕ್ರಾಂತಿಗೆ ಇಂದಿರಾ ಕಾಂಗ್ರೆಸ್ ಮತ್ತದರ ಸರ್ಕಾರವೇ ಮುಖ್ಯ ಶತ್ರುವಾಗಿ ಬೆಳೆದದ್ದು ಇವುಗಳಿಂದ ಮಾರ್ಕ್ಸ್‌ವಾದಿ ಪಕ್ಷವು ಹೊಸ ಕಾರ್ಯನೀತಿಯನ್ನು ಅನುಸರಿಸಬೇಕಾಯಿತು. ಕ್ರಾಂತಿಕಾರಿ ಚಳುವಳಿಗೆ ಇಂಡಿಕೇಟ್ ಕಾಂಗ್ರೆಸ್ ಮತ್ತು ಸಿಂಡಿಕೇಟ್ ಕಾಂಗ್ರೆಸ್‌ಗಳೆರಡೂ ಮುಖ್ಯ ಶತ್ರುಗಳೆಂದು ಭಾವಿಸುವ ಮತ್ತು ಅವುಗಳನ್ನು ಬಯಲು ಮಾಡಿ ಎರಡರ ವಿರುದ್ಧವೂ ಹೋರಾಡುವ ಹೊಸ ಕಾರ್ಯನೀತಿಯನ್ನು ಅನುಸರಿಸಲಾಯಿತು. 1971ರ ಸಾರ್ವತ್ರಿಕ ಚುನಾವಣೆ ಮತ್ತು 1972ರ ರಾಜ್ಯ ವಿಧಾನ ಸಭೆ ಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಪಕ್ಷ ಅನುಸರಿಸಿದ ಕಾರ್ಯನೀತಿಯು ಇದರ ಆಧಾರದ ಮೇಲೆ ರೂಪಿತವಾಯಿತು.

ಕಮ್ಯುನಿಸ್ಟ್ ಪಕ್ಷ ಮತ್ತು ಸಮಾಜವಾದಿಗಳ ಕಾರ್ಯನೀತಿ :

ಇದೇ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕರು ಅನುಸರಿಸಿದ ಕಾರ್ಯನೀತಿ ಯಾವುದು? ಅವರದು ಆಳುವ ಕಾಂಗ್ರೆಸ್ ಪಕ್ಷದೊಡನೆ ಮೈತ್ರಿ ಮತ್ತು ಸಹಕಾರ ಸಾಧಿಸುವ ಕಾರ್ಯನೀತಿಯಾಗಿತ್ತು; ಆಳುವ ಕಾಂಗ್ರೆಸ್‌ನೊಡನೆ ಮಾರ್ಕ್ಸ್‌ವಾದಿ ಐಕ್ಯರಂಗಗಳನ್ನು ವಿರೋಧಿಸುವಕಾರ್ಯನೀತಿಅದಾಗಿತ್ತು ಇಂದಿರಾಗಾಂಧಿಯ ತುರ್ತು ಆಳಿಕೆಯನ್ನು ಪ್ರಜಾಪ್ರಭುತ್ವ ವಿರೋಧಿ ಸಂವಿಧಾನದ 42ನೇ ತಿದ್ದುಪಡಿಯನ್ನು ಬೆಂಬಲಿಸುವುದಕ್ಕೆ ದಾರಿ ಮಾಡಿದ ಕಾರ್ಯನೀತಿ ಆಗಿತ್ತು.

ವಿವಿಧ ಧೋರಣೆಗಳ ಸಮಾಜವಾದಿ ಸ್ನೇಹಿತರು ಈ ಅವಧಿಯಲ್ಲಿ ಯಾವ ಕಾರ್ಯನೀತಿ [illegible]..? ಅವರು ಸಿಂಡಿಕೇಟ್ ಕಾಂಗ್ರೆಸ್‌ನೊಡನೆ ಮೈತ್ರಿ ಬೆಳೆಸಿ, 1971 ಮತ್ತು 1972ರ ಚುನಾವಣೆಗಳೆರಡರಲ್ಲೂ ಇಂಡಿಕೇಟ್ ಕಾಂಗ್ರೆಸ್ಸನ್ನು ವಿರೋಧಿಸಿದರು. ಅಂಥ ಕಾರ್ಯನೀತಿಗಳ ಪರಿಣಾಮಗಳು ಜನತೆಗೆ ಗೊತ್ತೇ ಇದೆ. ಇದರಿಂದ ಸಮಾಜವಾದಿಗಳ ವಾಮಭಾಯೆಗೆ ತುಂಬಾ ಪೆಟ್ಟುಬಿದ್ದು, ಅವರ ಸ್ವತಂತ್ರ ರಾಜಕೀಯ ವ್ಯಕ್ತಿತ್ವ ಪೂರ್ಣವಾಗಿ ಹಾಳಾಯಿತು.

ಇಂದಿರಾಗಾಂಧಿ ಮತ್ತು ಅವರ ಭ್ರಷ್ಟಾಚಾರದ, ದಬ್ಬಾಳಿಕೆ ಆಡಳಿತದ ವಿರುದ್ಧ ಜಯಪ್ರಕಾಶ್ ನಾರಾಯಣ್ ನಡೆಸಿದ ರಾಷ್ಟ್ರಾದ್ಯಂತ ಚಳುವಳಿ 1974ರ ಮಧ್ಯದಲ್ಲಿ ಬಂದಿತು. ಸಮಾಜವಾದಿಗಳು ಮತ್ತಿತರ ಎಡ ಪಕ್ಷಗಳು ಸೇರಿದಹಾಗೆ ರಾಷ್ಟ್ರೀಯ ಸಮನ್ವಯ ಸಮಿತಿಗೆ ಸೇರದೆ ಅಥವಾ 1977ರಲ್ಲಿ ಜನತಾಪಕ್ಷದೊಳಗೆ ಸೇರಿದ ಸಮಾಜವಾದಿಗಳು, ಕಾಂಗ್ರೆಸ್‌ನ "ಯಂಗ್ ಟರ್ಕ್‌ಗಳು" ಮತ್ತಿತರರು ಮಾಡಿದಹಾಗೆ ಮಾಡದೆ, ಮಾರ್ಕ್ಸ್‌ವಾದಿ ಪಕ್ಷವು ಜೆ. ಪಿ. ಚಳುವಳಿಯನ್ನು ಬೆಂಬಲಿಸುವ ಕಾರ್ಯನೀತಿಯನ್ನು ಅನುಸರಿಸಿತು.

1974ರ ಮೇನಲ್ಲಿ ನಡೆದ ರೈಲ್ವೆ ಕೆಲಸಗಾರರ ಮುಷ್ಕರಕ್ಕೆ ಸ್ವಲ್ಪ ಮುಂಚೆ ಎಡರಂಗದ ಐಕ್ಯತೆಯನ್ನು ಧಿಕ್ಕರಿಸಿದ, ಜೆ. ಪಿ. ಯವರ ರಾಷ್ಟ್ರೀಯ ಸಮನ್ವಯ ಸಮಿತಿಯನ್ನು ಸೇರಿದ ಮತ್ತು ಕೊನೆಗೆ 1977 ರಲ್ಲಿ ಜನತಾಪಕ್ಷದೊಡನೆ ವಿಲೀನಗೊಂಡ ಸಮಾಜವಾದಿಗಳ ಕಾರ್ಯನೀತಿ ಈಗ ಒಂದು ಚಾರಿತ್ರಿಕ ಸಂಗತಿಯಾಗಿ ಸ್ಥಾಪನೆಗೊಂಡಿದೆ. 1974 ರ ಮೊದಲಲ್ಲಿ ರೂಪುಗೊಂಡ ಎಡರಂಗವನ್ನು ಮುರಿಯಲು ಮತ್ತು ಕಾಂಗ್ರೆಸ್‌ನೊಡನೆ ಸೇರಿ ಜೆ.ಪಿ. ಚಳುವಳಿಯನ್ನು ಸಾಮ್ರಾಜ್ಯಶಾಹಿಯಿಂದ ಉತ್ತೇಜಿತಗೊಂಡ ಫ್ಯಾಸಿಸ್ಟ್ ಚಳುವಳಿ ಎಂದು ಕರೆದ ಕಮ್ಯುನಿಸ್ಟ್ ಪಕ್ಷದ ಕಾರ್ಯನೀತಿಯೂ ಈಗ ಚಾರಿತ್ರಿಕ ಸಂಗತಿ, ತಮ್ಮ ಕಾರ್ಯನೀತಿಗಳು ಜನತೆಯ ಬೆಂಬಲ ಪಡೆಯುತ್ತಿವೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಜನತೆಯಿಂದ ದೂರವಾಗುತ್ತಿದೆ ಎಂದು ಸಮಾಜವಾದಿ ಸ್ನೇಹಿತರು ಮತ್ತು ಕಮ್ಯುನಿಸ್ಟ್ ಪಕ್ಷಗಳೆರಡೂ ಹೇಳಿಕೊಳ್ಳುತ್ತಿದ್ದವು.

ಅಂತಿಮ ಪರಿಣಾಮ :

ಆದರೆ ಕೊನೆಗೆ ಆದದ್ದೇನು? ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರತಿಷ್ಠೆಯು ಜನತೆಯ ನಡುವೆ ಅಪಾರವಾಗಿ ಬೆಳೆದು, ಅದರ ಫಲಿತಾಂಶಗಳನ್ನು 1977, 78 ಮತ್ತು 79ರ ರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳಲ್ಲಿ ಕಾಣಬಹುದು. ಜನತೆ ಮತ್ತು ವರ್ಗಹೋರಾಟಗಳಿಗೆ ನೇತೃತ್ವ ಕೊಡುವುದರಲ್ಲಿ ಪಕ್ಷ ವಹಿಸಿದ ಪಾತ್ರ, ಕೇರಳ ತ್ರಿಪುರಾಗಳಿಗೂ ಹಬ್ಬಲಿದ್ದ ಪ. ಬಂಗಾಳದ ಅರೆಫ್ಯಾಸಿಸ್ಟ್ ಆಡಳಿತ ವಿರುದ್ಧ ಹೋರಾಡಿ ಪ್ರಜಾಪ್ರಭುತ್ವವನ್ನು ರಕ್ಷಿಸಿದ್ದು, ಇವೆಲ್ಲವೂ ಪಕ್ಷದ ಪ್ರತಿಷ್ಠೆ ಬೆಳೆಯಲು ಸಹಾಯಮಾಡಿವೆ.

ಜನತಾಪಕ್ಷ ಮತ್ತು ಸರ್ಕಾರ :

ಇನ್ನೊಂದು ಉದಾಹರಣೆ ತೆಗೆದುಕೊಳ್ಳಿ, ಜನತಾಪಕ್ಷದ ಮೂಲಭೂತ ವರ್ಗಸ್ವರೂಪ ಮತ್ತು ಅದರ ಜನವಿರೋಧಿ ವರ್ಗನೀತಿಗಳನ್ನು ಒಂದು ಕ್ಷಣವೂ ಮರೆಯದೆ, ಅದು ಎಲ್ಲಿಯವರೆಗೆ ಇಂದಿರಾ ಕಾಂಗ್ರೆಸ್ ನೇತೃತ್ವದ ಅಧಿಕಾರಶಾಹಿಯ ವಿರುದ್ಧ ಹೋರಾಡುತ್ತದೋ ಅಲ್ಲಿಯವರೆಗೆ ಜನತಾಪಕ್ಷಕ್ಕೆ ಮಾರ್ಕ್ಸ್‌ವಾದಿ ಪಕ್ಷ ಬೆಂಬಲ ಕೊಟ್ಟಿತ್ತು. 1970-71ರಲ್ಲಿ ಇಂದಿರಾ ಗಾಂಧಿಯವರ ಪಕ್ಷ ಮತ್ತು ಸರ್ಕಾರಕ್ಕೆ ಬೆಂಬಲ ಕೊಟ್ಟಾಗ ಕಮ್ಯುನಿಸ್ಟ್‌ಪಕ್ಷ ಯಾವ ತಪ್ಪನ್ನು ಮಾಡಿತ್ತೋ ಅದೇ ತಪ್ಪನ್ನು ಮಾರ್ಕ್ಸ್‌ವಾದಿ ಪಕ್ಷವು ಜನತಾಪಕ್ಷಕ್ಕೆ ಬೆಂಬಲ ಕೊಡುವುದರಿಂದ ಮಾಡುತ್ತಿದೆ ಎಂದು ಕಮ್ಯುನಿಸ್ಟ್ ಪಕ್ಷವು ಇದನ್ನು ಬಲ ಅವಕಾಶವಾದಿ ಎಂದು ಜರೆಯಿತು.

ಕಾಂಗ್ರೆಸ್ (ಐ) ನೇತೃತ್ವದ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ನಡೆಸಿದ ಹೋರಾಟದಲ್ಲಿ ಜನತಾಪಕ್ಷ ಮತ್ತು ಅದರ ಸರ್ಕಾರವು ವಹಿಸಿದ ಪಾತ್ರವನ್ನು ಸಂಪೂರ್ಣವಾಗಿ ಮರೆತ ಕಮ್ಯುನಿಸ್ಟ್ ಪಕ್ಷವು ಕಳೆದ ಎರಡೂವರೆ ವರ್ಷಗಳಿಂದ ಜನತಾಪಕ್ಷವನ್ನು ವಿರೋಧಿಸಿ, ಕಾಂಗ್ರೆಸ್ (ಐ)ಗೆ ಸಾಕಷ್ಟು ತಮಾಷೆ ಮತ್ತು ಸಂತೋಷವನ್ನು ಒದಗಿಸುತ್ತಿದೆ. ಕಮ್ಯುನಿಸ್ಟ್ ಪಕ್ಷದ ನಾಯಕರು ಜನತಾಪಕ್ಷವನ್ನು ಆರೆಸ್ಸೆಸ್ ಮತ್ತುಜನಸಂಘಗಳಿಗೆ ಸಮಾನವಾಗಿ ಕಾಣುತ್ತಿದ್ದಾರಲ್ಲದೆ, ಜನತಾಪಕ್ಷದೊಳಗೇ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಗುಂಪೊಂದು ಹುಟ್ಟಿಕೊಂಡು, ಆರೆಸ್ಸೆಸ್-ಜನಸಂಘ ಮೇಲುಗೈಯನ್ನು ವಿರೋಧಿಸಬಹುದು ಎಂಬುದನ್ನು ಊಹಿಸಿಕೊಳ್ಳುತ್ತಲೂ ಇಲ್ಲ.

ಜೀವನ ಮತ್ತು ಘಟನೆಗಳು ಅವರನ್ನು ಮಾರ್ಕ್ಸ್‌ವಾದಿ ಪಕ್ಷದ ಕಾರ್ಯನೀತಿಯು ಸರಿಯಾದದ್ದು ಎಂಬುದನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಿದೆ. ಈಗ ಅವರು ತಾವು ಸರ್ವಾಧಿಕಾರ ಮತ್ತು ಕೋಮುವಾದಗಳೆರಡನ್ನೂ ವಿರೋಧಿಸುತ್ತೇವೆಂದು ಹೇಳಿಕೊಂಡಿದ್ದಾರೆ. ಕಾಂಗ್ರೆಸ್ (ಐ)ನ ಸರ್ವಾಧಿಕಾರಿ ವೇದಿಕೆ ಮತ್ತು ಆರೆಸ್ಸೆಸ್ ಮೇಲುಗೈನ ಜಗಜೀವನ್‌ರಾಮರ ಜನತಾಪಕ್ಷಗಳೆರಡನ್ನೂ ವಿರೋಧಿಸಿ, ಜನತಾ (ಎಸ್) ಮತ್ತು ಕಾಂಗ್ರೆಸ್ (ಎಸ್)ಗಳ ಕೂಟಕ್ಕೆ ಬೆಂಬಲ ನೀಡುವುದಾಗಿ ಹೇಳಿದ್ದಾರೆ.

ಸರಿಯಾದ ಮಾರ್ಗ :

ಕಳೆದ ಹದಿನೈದು ವರ್ಷಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯನೀತಿಯು ಹೀಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯನೀತಿಯು ಅವಕಾಶವಾದಿಯಾಗಿಯೂ ಇಲ್ಲ ನಿಯಮರಹಿತವಾಗಿಯೂ ಇಲ್ಲ ಎಂಬುದನ್ನು ಹೇಳುವಾಗ, ನಾವು ತಪ್ಪುಗಳನ್ನೇನೂ ಮಾಡಿಲ್ಲ ಎಂದು ಹೇಳಿಕೊಳ್ಳುವುದಿಲ್ಲ. ನಾವು ಒತ್ತಿಹೇಳುವ ವಿಚಾರವೆಂದರೆ, ನಮ್ಮ ಪಕ್ಷವು ಅನುಸರಿಸಿರುವ ಕಾರ್ಯನೀತಿಯು ವಿಶಾಲವಾಗಿ ಮತ್ತು ಸಾಮಾನ್ಯವಾಗಿ ಸರಿಯಾದ ದಾರಿಯನ್ನೇ ಹಿಡಿದಿದೆ. ರಾಷ್ಟ್ರೀಯ ರಾಜಕೀಯ ಜೀವನದಲ್ಲಿ ಮಾರ್ಕ್ಸ್‌ವಾದಿ ಪಕ್ಷಕ್ಕೆ ಈಗಿರುವ ಸ್ಥಾನವು ಅದರ ಮೂಲಭೂತ ಸರಿಯಾದ ಕಾರ್ಯಕ್ರಮ ಮತ್ತು ನೀತಿ ಅಥವಾ ಕಾರ್ಯನೀತಿಗಳಿಂದಲೇ ಬಂದಿದೆ.

ಜನತೆಯ ನಡುವೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಮಸಿ ಬಳಿಯಲು ಉದ್ದೇಶಿಸುವ ನಮ್ಮ ಉಗ್ರ ವಿಮರ್ಶಕರು ಒಂದೆರಡು ಪಾಠಗಳನ್ನು ಕಲಿತು ತಮ್ಮ ಮಾರ್ಕ್ಸ್‌ವಾದಿ ಪಕ್ಷ ವಿರೋಧಿ ಚಟುವಟಿಕೆಗಳಿಂದ ದೂರ ಉಳಿಯಲಿ, ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯ ತೀವ್ರ ತಿರುವುಗಳು ಮತ್ತು ಮಾರ್ಕ್ಸ್‌ವಾದಿ ಪಕ್ಷದ ಕಾರ್ಯನೀತಿಯ ಬದಲಾವಣೆಗಳಿಂದ ಗೊಂದಲಕ್ಕೀಡಾಗಿರುವ ನಮ್ಮ ಸ್ನೇಹಿತರು ಮತ್ತು ಹಿತೈಷಿಗಳು ನಮ್ಮ ಪಕ್ಷದ ಹಿಂದಿನ ಮತ್ತು ಇವತ್ತಿನ ಕಾರ್ಯನೀತಿಗಳನ್ನು ಸಹನೆಯಿಂದ ಪರಿಶೀಲಿಸಬೇಕು. ನಮ್ಮ ವಿರೋಧಿಗಳ ಕೆಟ್ಟ ಪ್ರಚಾರವನ್ನು ನಂಬಬಾರದು.

ಸದ್ಯದ ಜುಲೈ-ಆಗಸ್ಟ್ 1979ರ ಬಿಕ್ಕಟ್ಟಿನಲ್ಲಿ ಮಾರ್ಕ್ಸ್‌ವಾದಿ ಪಕ್ಷವು ಅನುಸರಿಸಿದ ಕಾರ್ಯನೀತಿಗೆ, ಹಿಂದಿನ 15 ವರ್ಷಗಳಲ್ಲಿ ಯಾವ ನೀತಿಗಳು ಮತ್ತು ಉದ್ದೇಶಗಳು ಆಧಾರವಾಗಿದ್ದವೋ ಅವೇ ಈಗಲೂ ಆಧಾರವಾಗಿರುತ್ತವೆ.

ಒಂದು ಪಕ್ಷದ ಚರಿತ್ರೆ ಅಥವಾ ಅದರ ನಾಯಕರ ಹಿಂದಿನ ಕಾರ್ಯಗಳು ಅವೆಷ್ಟೇ ಪ್ರಮುಖವಾಗಿದ್ದರೂ ಕೂಡ, ಅವುಗಳ ಆಧಾರದ ಮೇಲೆ ಒಂದು ರಾಜಕೀಯ ಪಕ್ಷವು ಒಂದು ಪರಿಸ್ಥಿತಿಗೆ ಅನುಗುಣವಾದ ರಾಜಕೀಯ ದೃಷ್ಟಿಕೋನವನ್ನು ನಿರ್ಧರಿಸಲಾಗುವುದಿಲ್ಲ. ಇತರ ಪಕ್ಷಗಳ-ಉದ್ದೇಶಗಳನ್ನು ಗಮನಕ್ಕೆ ತಂದುಕೊಳ್ಳುವುದು ಅಗತ್ಯವಾಗಿದ್ದರೂ ಕೇವಲ ಅದರ ಆಧಾರದ ಮೇಲೆ ಒಂದು ಪಕ್ಷವು ಇತರ ಪಕ್ಷಗಳ ಬಗ್ಗೆ ದೃಷ್ಟಿಕೋನ ರೂಪಿಸಿಕೊಳ್ಳಲಾಗುವುದಿಲ್ಲ. ಒಂದು ಪಕ್ಷದ ಪಾತ್ರವು, ಪ್ರತಿಗಾಮಿ ಶಕ್ತಿಗಳನ್ನು ನಿಗ್ರಹಿಸಿ, ಪ್ರಗತಿಶೀಲ ಶಕ್ತಿಗಳಿಗೆ ಸಹಾಯಮಾಡಿದೆಯೋ ಇಲ್ಲವೇ ಎಂಬುದನ್ನು ವಸ್ತುನಿಷ್ಠವಾಗಿ ಪರಿಶೀಲಿಸಬೇಕು.

ಕಾಂಗ್ರೆಸ್ (ಐ) ಪ್ರತಿನಿಧಿಸುವ ಸರ್ವಾಧಿಕಾರಿ ವೇದಿಕೆ ಮತ್ತು ಆರೆಸ್ಸೆಸ್-ಜನಸಂಘ ಮೇಲುಗೈನ ಜನತಾ ಪಕ್ಷ ಪ್ರತಿನಿಧಿಸುವ ಕೋಮುವಾದಿ ಶಕ್ತಿಗಳು-ಇವೆರಡರ ವಿರುದ್ಧ ನಡೆಸುವ ಹೋರಾಟವೇ, ಸದ್ಯದ ಬಿಕ್ಕಟ್ಟಿನಲ್ಲಿ ಮಾರ್ಕ್ಸ್‌ವಾದಿ ಪಕ್ಷ ಅನುಸರಿಸುವ ಕಾರ್ಯನೀತಿಯನ್ನು ನಿರ್ಧರಿಸುವ ಮುಖ್ಯ ಅಂಶವಾಗಿರುತ್ತದೆ. ಇದೊಂದೇ ನಮ್ಮ ನಿಯಮವುಳ್ಳ ನಿಲುವನ್ನು ವಿವರಿಸುತ್ತದೆ.

ಹೀಗೆ ಕಾರ್ಮಿಕರ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಆಳುವ ಬೂರ್ಜ್ವಾ-ಭೂಮಾಲೀಕ ವರ್ಗಗಳ ಜೊತೆ ಹೋರಾಡುವಾಗ, ಬೇರೆಯಾವ ಪಕ್ಷವೂ ದುರುಪಯೋಗಪಡಿಸಿಕೊಳ್ಳಲಾರದಂಥ ಕಾರ್ಯನೀತಿಯನ್ನು ಅನುಸರಿಸಿದೆ. ಅದೇ ವೇಳೆಗೆ, ಆಳುವ ವರ್ಗಗಳ ಪಕ್ಷಗಳಲ್ಲಿ ಪದೇ ಪದೇ ಉಂಟಾಗುವ ಭಿನ್ನಾಭಿಪ್ರಾಯಗಳನ್ನು ಉಪಯೋಗಿಸಿಕೊಂಡು ಪ್ರಜಾಪ್ರಭುತ್ವವಾದಿ ಮತ್ತು ಕ್ರಾಂತಿಕಾರಿ ಚಳುವಳಿಯನ್ನು ಮುನ್ನಡೆಸುವ ಒಂದು ಅವಕಾಶವನ್ನೂ ನಮ್ಮ ಪಕ್ಷ ಉಪಯೋಗಿಸಿಕೊಳ್ಳದೆ ಬಿಟ್ಟಿಲ್ಲ. ●

ಕುಂದಾಪುರ ವಿದ್ಯಾರ್ಥಿಗಳ ಮೇಲೆ ಪೋಲೀಸರ ಅಮಾನುಷ ದೌರ್ಜನ್ಯ

ತಾರೀಖು 5-9-79 ರಂದು ಬೆಳಿಗ್ಗೆ ಕುಂದಾಪುರ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಗೊಂದಲಮಯ ವಾತಾವರಣ ಕಂಡುಬರುತ್ತಿತ್ತು. ಒಂದೆಡೆ ವಿನಾಕಾರಣ 144ನೇ ವಿಧಿಯನ್ವಯ ನಿಷೇಧಾಜ್ಞೆ ಜಾರಿಗೊಳಿಸಿದ ಬಗ್ಗೆ ಕೌತುಕ, ಮತ್ತೊಂದೆಡೆ ತರಗತಿಗಳು ನಡೆಯುತ್ತವೆಯೋ, ಇಲ್ಲವೋ ಎಂಬ ಸಂಶಯದಿಂದ ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಗುಂಪು ಸೇರಿದ್ದರು. ಪೋಲೀಸರು ಯಾವ ಪ್ರಚೋದನೆಯೂ ಇಲ್ಲದೆ, ವಿದ್ಯಾರ್ಥಿಗಳನ್ನು ಚದುರಿಸಲು ಲಾಠಿ ಛಾರ್ಜು ಮಾಡಿದ್ದಲ್ಲದೆ, ಅಶ್ರುವಾಯು ಪ್ರಯೋಗಿಸಿದರು. ಕಾಲೇಜಿನ ಆವರಣವನ್ನು ಪ್ರವೇಶಿಸಿದ ಪೋಲೀಸರು, ವಿದ್ಯಾರ್ಥಿಗಳನ್ನು ಹಾಗೂ ರಸ್ತೆಯ ಮೇಲೆ ಹೋಗುತ್ತಿದ್ದ ಸಾರ್ವಜನಿಕರನ್ನೂ ಥಳಿಸಿದರು. ಮೀಸಲು ಪಡೆ ಪೋಲೀಸರು, ಹಾಸ್ಟೆಲೊಂದನ್ನು ಪ್ರವೇಶಿಸಿ, ಸಾವಿರಾರು ರೂಪಾಯಿ ಸ್ವತ್ತನ್ನು ನಾಶಮಾಡಿದ್ದಾರೆ. ಟ್ರಾನ್ಸಿಸ್ಟರ್, ವಾಚು ಹಾಗೂ ಚಿನ್ನದ ಚೈನುಗಳು ನಾಪತ್ತೆಯಾಗಿವೆ. ಇಪ್ಪತ್ತಕ್ಕೂ ಹೆಚ್ಚು ಸೈಕಲ್‌ಗಳನ್ನು ವ್ಯಾನ್ ಏರಿಸಿ ಜಜ್ಜಿ ಹಾಕಿದ್ದಾರೆ.

ಬಂಧಿಸಲ್ಪಟ್ಟ ನಲವತ್ತು ವಿದ್ಯಾರ್ಥಿಗಳಲ್ಲಿ ಸ್ಥಳೀಯ ಭಾರತ ವಿದ್ಯಾರ್ಥಿ ಫೆಡರೇಶನ್ನಿನ ಕಾರ್ಯದರ್ಶಿ ಶ್ರೀ ಆರ್. ಜಯಕುಮಾರ್‌ರವರೂ ಸೇರಿದಂತೆ ಒಟ್ಟು ಎಂಟು ಮಂದಿ ಎಸ್. ಎಫ್. ಐ. ಕಾರ್ಯಕರ್ತರಿದ್ದರು.

ಎಸ್. ಎಫ್. ಐ. ಕುಂದಾಪುರ ಘಟಕವು ಪೋಲೀಸರ ಅಮಾನುಷ ದೌರ್ಜನ್ಯವನ್ನು ಖಂಡಿಸಿದೆ ಹಾಗೂ ಮೇಲಿನ ಘಟನೆಗಳ ಬಗ್ಗೆ ನಿಷ್ಪಕ್ಷ ತನಿಖೆಗೆ ಒತ್ತಾಯಪಡಿಸಿದೆ.

ಕುಂದಾಪುರ ಬಂದ್ :

ತಾರೀಖು 6-9-79 ರಂದು ನಿರಪರಾಧಿ ವಿದ್ಯಾರ್ಥಿಗಳ ಮೇಲೆ ಪೋಲೀಸರ ಅತ್ಯಾಚಾರವನ್ನು ವಿರೋಧಿಸಿ ಕುಂದಾಪುರ ಬಂದ್ ನಡೆಸಲಾಯಿತು. ನಾಗರೀಕರು ಸಹಕರಿಸಿ ಬಂದ್ ಯಶಸ್ವಿಗೊಳಿಸಿದ ಪ್ರಯುಕ್ತ, ಎಸ್.ಎಫ್.ಐ. ಕುಂದಾಪುರ ಶಾಖೆಯು ಬಂದ್ ಕಾರ್ಯಕ್ರಮದಲ್ಲಿ ಸಹಕರಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದೆ.

ವಿದ್ಯಾರ್ಥಿಗಳ ರಕ್ಷಕರ ಹಾಗೂ ಹೆತ್ತವರ ನಿಯೋಗವೊಂದು ಮಂಗಳೂರಿಗೆ ಹೋಗಿ ಜಿಲ್ಲಾಧಿಕಾರಿಯವರನ್ನು ಕಂಡು ಪೋಲೀಸರ ವರ್ತನೆ ಕುರಿತು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ, ಮನವಿ ಸಲ್ಲಿಸಿದ್ದಾರೆ.

●

ಆರ್ಥಿಕ ಸಮೀಕ್ಷೆ:

[3ನೇ ಪುಟದಿಂದ]

22.50 ಎಂದು ನಿಗದಿಪಡಿಸಿ, 1973-74ರಲ್ಲಿ ಅನುಕ್ರಮವಾಗಿ ಆ ಪ್ರದೇಶಗಳಲ್ಲಿನ ಶೇ. 40 ಮತ್ತು ಶೇ. 50ರಷ್ಟು ಜನರು ಈ ಬಡತನದ ಆದಾಯದ ರೇಖೆಗಿಂತಲೂ ಕೆಳಮಟ್ಟದಲ್ಲಿ ಇರುವರೆಂದು ಅಂದಾಜು ಮಾಡಿರುವರು. 19-8-62ರ 'ಕಾಮರ್ಸ್' ಮತ್ತು 1-9-72ರ 'ಇಕನಾಮಿಕ್ಸ್ ವೀಕ್ಲಿ'ಗಳಲ್ಲಿ ಪ್ರಕಟವಾದ ನ್ಯಾಶನಲ್ ಸ್ಯಾಂಪಲ್ ಸರ್ವೆಯ ಆಧಾರದಲ್ಲಿ ಇನ್ನೊಂದು ಸಮೀಕ್ಷೆ ನಡೆಸಲಾಗಿದೆ. ಅದರಂತೆ, 1967-68ರ ಧಾರಣೆಗಳಲ್ಲಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಪ್ರತಿಯೊಬ್ಬನ ಜೀವನಾವಶ್ಯಕ ಕನಿಷ್ಟ ಮಾಸಿಕ ಸರಾಸರಿ ವೆಚ್ಚವು ರೂ. 20 ಎಂದಾದರೆ, 1970 ರಷ್ಟರಲ್ಲಿಯೇ ದೇಶದ ಒಟ್ಟು ಜನರ ಶೇ. 70ರಷ್ಟು ಜನರು ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿರುವರೆಂದು ಅಂದಾಜು ಮಾಡಲಾಗಿದೆ. ಅಂತಹ ಕನಿಷ್ಟ ವೆಚ್ಚವು ರೂ. 35 ಆದರೆ, ದೇಶದ ಒಟ್ಟು ಜನರ ಶೇ. 90 ರಷ್ಟು ಜನರು ಬಡತನದ ರೇಖೆಗಿಂತಲೂ ಕೆಳಮಟ್ಟದಲ್ಲಿರುವರು!

28ನೇ ಸುತ್ತಿನ ನ್ಯಾಶನಲ್ ಸ್ಯಾಂಪಲ್ ಸರ್ವೆಯ ಆಧರಿತವಾದ ಇನ್ನೊಂದು ಅಧ್ಯಯನದಂತೆ, 1973-74ರಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಕುಟುಂಬಗಳಲ್ಲಿ ಪ್ರತಿಯೊಬ್ಬನ ಜೀವನಾವಶ್ಯಕ ಕನಿಷ್ಟ ಮಾಸಿಕ ಸರಾಸರಿ ವೆಚ್ಚವು ಅನುಕ್ರಮವಾಗಿ ರೂ. 43 ಮತ್ತು ರೂ. 55 ಕ್ಕಿಂತಲೂ ಕಡಿಮೆ ಇರುವವರನ್ನು ಬಡವರೆಂದೂ, ರೂ. 34 ಮತ್ತು ರೂ. 43 ಕ್ಕಿಂತಲೂ ಕಡಿಮೆ ಇರುವವರನ್ನು ದರಿದ್ರರೆಂದೂ, ರೂ. 28 ಮತ್ತು ರೂ. 34 ಕ್ಕಿಂತಲೂ ಕಡಿಮೆ ಇರುವವರನ್ನು ದಟ್ಟದರಿದ್ರರೆಂದೂ ಬೇರೆಬೇರೆಯಾಗಿ ಗುರುತಿಸಲಾಗಿದೆ. ಈ ಅಧ್ಯಯನದಂತೆ, ಈಗ ದೇಶದ ಒಟ್ಟು 625 ಮಿಲಿಯ ಜನಸಂಖ್ಯೆಯಲ್ಲಿ ಶೇ. 13.24 ರಷ್ಟು (83 ಮಿಲಿಯ) ದಟ್ಟದರಿದ್ರರೆಂದೂ, ಶೇ. 12.75 ರಷ್ಟು (80 ಮಿಲಿಯ) ದರಿದ್ರರೆಂದೂ ಮತ್ತು ಶೇ. 19.53ರಷ್ಟು (122 ಮಿಲಿಯ) ಬಡವರೆಂದೂ, ಒಟ್ಟು ಶೇ. 45.52 ರಷ್ಟು (285 ಮಿಲಿಯ) ಜನರು ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿರುವರೆಂದೂ ಅಂದಾಜು ಮಾಡಲಾಗಿದೆ. ಯೋಜನಾ ಆಯೋಗದ 1973-74ರ ಸಮೀಕ್ಷೆಯಂತೆ, ಒಟ್ಟು ಜನಸಂಖ್ಯೆಯ ಶೇ. 60 ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿಯೂ ಮತ್ತು ಶೇ. 55 ರಷ್ಟು ಜನರು ನಗರ ಪ್ರದೇಶಗಳಲ್ಲಿಯೂ ಬಡತನ ರೇಖೆಯ ಕೆಳಮಟ್ಟದಲ್ಲಿರುವರೆಂದೇ ತಿಳಿಯುವಾ. ಆಗ ಸದ್ಯದ ಒಟ್ಟು 625 ಮಿಲಿಯ ಜನಸಂಖ್ಯೆಯಲ್ಲಿ 255 ಮಿಲಿಯ ಗ್ರಾಮೀಣ ಜನರು ಮತ್ತು 80 ಮಿಲಿಯ ಪಟ್ಟಣದ ಜನರು, ಒಟ್ಟು 335 ಮಿಲಿಯ ದೇಶ ಬಾಂಧವರು ಬಡತನ ರೇಖೆಗಿಂತಲೂ ಕೆಳಮಟದಲ್ಲಿರುವರೆಂದು ತಿಳಿಯಬಹುದು. ಒಟ್ಟು ಬಡವರಲ್ಲಿ 97 ಮಿಲಿಯ (ಶೇ. 29) ದಟ್ಟದರಿದ್ರರೂ, 190 ಮಿಲಿಯ (ಶೇ. 59) ದರಿದ್ರರೂ ಮತ್ತು 48 ಮಿಲಿಯ (ಶೇ. 14) ಬಡವರೂ ಎಂದೂ ಮೇಲಿನ ಅಧ್ಯಯನದಿಂದ ತಿಳಿದುಬರುವುದು.

ಡಾಂಡೇಕರ್ ಮತ್ತು ರಾತ್ ಇವರ ಅಧ್ಯಯನದಂತೆ, ಪ್ರತಿಯೊಬ್ಬ ವ್ಯಕ್ತಿಯು ದಿನಕ್ಕೆ 2250 ಕೆಲೋರಿ ಶಕ್ತಿಯನ್ನು ನೀಡುವ ಆಹಾರ ಸೇವನೆಗಿಂತಲೂ ಕಡಿಮೆ ಜೀವನಮಟ್ಟದಲ್ಲಿದ್ದರೆ, ಬಡತನ ರೇಖೆಗಿಂತ ಕೆಳಗಿರುವವನೆಂದು ತಿಳಿಸಲಾಗಿದೆ. ಆದರೆ ಭಾರತದ ಜನರ ಸರಾಸರಿ ಆಹಾರ ಸೇವನೆಯು 2000 ಕೆಲೋರಿಗಿಂತಲೂ ಕಡಿಮೆ ಶಕ್ತಿಯನ್ನು ಕೊಡುವಷ್ಟಾಗಿದೆ. ಇದು ಅಭಿವೃದ್ಧಿ ಹೊಂದಿದ ದೇಶಗಳ ಜನರ ದೈನಿಕ ಸರಾಸರಿ ಆಹಾರ ಸೇವನೆಯ ಮೂರನೇ ಎರಡಕ್ಕಿಂತಲೂ ಕಡಿಮೆಯಾಗಿದೆ. ದೇಶದಲ್ಲಿ ಪ್ರತಿಯೊಬ್ಬನ ಸರಾಸರಿ ವೆಚ್ಚದಲ್ಲಿ ಸಿಂಹಪಾಲು-ಶೇ. 80ರಷ್ಟು ಹೊಟ್ಟೆಗೆ ಅನ್ನಕ್ಕಾಗಿಯೇ ಖರ್ಚಾಗುವುದು. 1975ರಲ್ಲಿ ಪ್ರತಿಯೊಬ್ಬನಿಗೆ ದಿನಕ್ಕೆ ಸಿಗುವ ಸರಾಸರಿ ಆಹಾರಧಾನ್ಯಗಳು 415 ಗ್ರಾಂ ಮತ್ತು ವರ್ಷಕ್ಕೆ ಸಿಗುವ ಖಾದ್ಯತೈಲ 3.2 ಕೆ. ಜಿ., ಸಕ್ಕರೆ 5.8 ಕೆ. ಜಿ. ಮತ್ತು ಬಟ್ಟೆ 12.9 ಮೀಟರ್. ಈಗ ಜನರ ಜೀವನ ಮಟ್ಟವು ಇನ್ನಷ್ಟೂ ಹದಗೆಟ್ಟಿದೆ.

ಜನರ ಜೀವನಾಧಾರವಾದ ಆದಾಯ ಮತ್ತು ಆಸ್ತಿಗಳ ವಿತರಣೆಯಲ್ಲಿ ಅಪಾರ ಅಸಮಾನತೆ ಇರುವುದೂ ಬಡತನ ದಾರಿದ್ರ್ಯಗಳ ಲಕ್ಷಣವಾಗಿದೆ. NCAER ಸಂಸ್ಥೆಯು 1972ರಲ್ಲಿ ಅಖಿಲ ಭಾರತ ಕೌಟುಂಬಿಕ ಆದಾಯದ ಉಳಿತಾಯ ಮತ್ತು ಜೀವನ ವೆಚ್ಚಗಳ ಒಂದು ಸಮೀಕ್ಷೆ ನಡೆಸಿತ್ತು. ಅದರಂತೆ, ವೆಚ್ಚ ಮಾಡಲು ಸಿಗುವ ದೇಶದ ಒಟ್ಟು ಕೌಟುಂಬಿಕ ಆದಾಯದಲ್ಲಿ ಅತ್ಯಂತ ಕೆಳಮಟ್ಟದಲ್ಲಿರುವ ಶೇ. 10 ರಷ್ಟು ಕುಟುಂಬಗಳು ಕೇವಲ ಶೇ. 1.80 ರಷ್ಟು ಆದಾಯ ಪಡೆದಿವೆ. ಈ ಬಡಕುಟುಂಬಗಳಿಗೆ ವೆಚ್ಚಮಾಡಲು ಸಿಗುವ ವಾರ್ಷಿಕ ಆದಾಯವು ರೂ. 495ರ ಒಳಗಿರುವುದು. ಅತ್ಯಂತ ಕೆಳಮಟ್ಟದಲ್ಲಿರುವ ಶೇ. 20 ರಷ್ಟು ಮತ್ತು ಶೇ. 50ರಷ್ಟು ಕುಟುಂಬಗಳು ಅನುಕ್ರಮವಾಗಿ ಶೇ. 4.8 ಮತ್ತು ಶೇ. 19ರಷ್ಟು ಆದಾಯ ಪಡೆದಿವೆ. ಆದರೆ ಅತ್ಯಂತ ಉನ್ನತ ಮಟ್ಟದ ಶೇ. 10 ರಷ್ಟು ಕುಟುಂಬಗಳು ಶೇ. 36 ರಷ್ಟು ಆದಾಯ ಪಡೆದಿವೆ. ಈ ಶ್ರೀಮಂತ ಕುಟುಂಬಗಳಿಗೆ ವೆಚ್ಚಮಾಡಲು ಸಿಗುವ ವಾರ್ಷಿಕ ಸರಾಸರಿ ಆದಾಯವು ರೂ. 10,000 ಕ್ಕೂ ಮೀರಿದೆ. ಅತ್ಯಂತ ಉನ್ನತ ಮಟ್ಟದ ಶೇ. 20 ಕುಟುಂಬಗಳು ಶೇ. 53ರಷ್ಟು ಆದಾಯ ಪಡೆದಿವೆ. ಕೇವಲ 1 ರಷ್ಟು ಅಗರ್ಭ ಶ್ರೀಮಂತ ಕುಟುಂಬಗಳು ಶೇ. 9ರಷ್ಟು ಆದಾಯ ಹೊಂದಿವೆ. ಸುಮಾರು ಇಷ್ಟೇ ಅಂಶ-ಶೇ. 8.5 ರಷ್ಟು ಆದಾಯವು ಶೇ. 30 ರಷ್ಟು ಅತ್ಯಂತ ಬಡಕುಟುಂಬಗಳಲ್ಲಿ ಹಂಚಿ ಹೋಗಿದೆ! ಈ ಪರಿಸ್ಥಿತಿಗಳು 1967-68ರ ಸಾಲಿಗೆ ಸಂಬಂಧಿಸಿದ್ದರೂ, ಒಂದು ದಶಕದ ನಂತರವೂ ಹೆಚ್ಚಿನ ಬದಲಾವಣೆಗಳಾಗದೆ ಅಸಮಾನತೆಯು ಗಂಭೀರವಾಗಿಯೇ ಉಳಿದಿದೆ. ಅದು ಹೆಚ್ಚುತ್ತಲೇ ಇದೆ.

ಗ್ರಾಮೀಣ ಪ್ರದೇಶಗಳಲ್ಲಿನ ಕೌಟುಂಬಿಕ ಜೀವನ ವೆಚ್ಚ, ಆದಾಯ ಮತ್ತು ಆಸ್ತಿಗಳ (ವ್ಯವಸಾಯ ಭೂಮಿಯೂ ಸೇರಿದಂತೆ) ಹಂಚಿಕೆಯುಲ್ಲಿರುವ ಅಸಮಾನತೆಗಳು ಈ ಕೆಳಗಿನ ಅಂಕಿ ಅಂಶಗಳಿಂದ ಸ್ಪಷ್ಟವಾಗುವುದು.

ಇದೇ ಸಂದರ್ಭ ಅತ್ಯಂತ ಉನ್ನತ ಮಟ್ಟದ ಶೇ. 4 ರಷ್ಟು ಕುಟುಂಬಗಳು ಗ್ರಾಮೀಣ ಪ್ರದೇಶಗಳ ಒಟ್ಟು ಆಸ್ತಿಗಳಲ್ಲಿ ಶೇ. 30 ರಷ್ಟು ಪಾಲು ಪಡೆದಿರುವುದನ್ನು ಗಮನಿಸಬಹುದು. ಈ ಶ್ರೀಮಂತ ಕುಟುಂಬಗಳ ಪ್ರತಿಯೊಂದರ ಆಸ್ತಿಗಳ ಮೌಲ್ಯವು ರೂ. 50,000 ಕ್ಕಿಂತಲೂ ಮೀರಿರುವುದು. ಅತ್ಯಂತ ಉನ್ನತ ಮಟ್ಟದ ಶೇ. 8.7 ರಷ್ಟು ಕುಟುಂಬಗಳು ಸುಮಾರು ಶೇ. 50 ರಷ್ಟು ಆಸ್ತಿ ಮೌಲ್ಯಗಳನ್ನು ಹೊಂದಿವೆ. ಆದರೆ, ಅತ್ಯಂತ ಕೆಳಮಟ್ಟದ ಶೇ. 35.3 ರಷ್ಟು ಬಡಕುಟುಂಬಗಳು ಕೇವಲ ಶೇ. 3 ರಷ್ಟು ಆಸ್ತಿಗಳನ್ನು ಹೊಂದಿದ್ದು ಅಸಮಾನತೆಯ ಅಗಾಧತೆಯನ್ನು ತೋರಿಸುತ್ತದೆ.

[ಮುಂದುವರಿಯುವುದು]

ಅಸಮಾನತೆಯ ವಿಷಯುಗಳು	ಗ್ರಾಮೀಣ ಕುಟುಂಬಗಳ ಶೇಕಡಾಪಾಲು		ಅಧಾರ
	ಅತ್ಯಂತ ಕೆಳಮಟ್ಟದ ಶೇ.20 ಕುಟುಂಬಗಳ ಪಾಲು	ಅತ್ಯಂತ ಉನ್ನತಮಟ್ಟದ ಶೇ. 20 ಕುಟುಂಬಗಳ ಪಾಲು	
ಜೀವನವೆಚ್ಚ (1973-74)	9.5%	38.0%	6ನೇ ಪಂಚವಾರ್ಷಿಕ ಯೋಜನೆ
ಆದಾಯ (1970-71)	8.0%	42.0%	NCEAR
ಆಸ್ತಿಗಳು (1970-71)	0.8%	69.0%	ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

ಪಿ. ರಾಮಚಂದ್ರರಾವ್ ಅಭಿಮತ

ರೈತ ಕಾರ್ಮಿಕರ ಮಾರ್ಗದರ್ಶನವೇ ದೇಶದ ಭದ್ರತೆಗೆ ಬುನಾದಿ

[ನಮ್ಮ ವರದಿಗಾರರಿಂದ]

"ಕಾಂಗ್ರೆಸ್‌ನವರೆ— ಜನತಾದವರೆ ಯಾರಿಗೋಸ್ಕರ ಆಡಳಿತ. ಅನ್ನ ಕೊಡಿ—ಬಟ್ಟೆಕೊಡಿ, ಎಲ್ಲರಿಗೂ ಕೆಲ್ಸ ಕೊಡಿ—ಇಲ್ಲದಿದ್ರೆ ರಾಜ್ಯ ಬಿಡಿ"— ಇದು ಕೋಲಾರ ಜಿಲ್ಲೆಯ ರೈತರ— ಬೇಸಾಯ ಕೂಲಿಗಾರರ ಒಕ್ಕೊರಲಿನ ಕೂಗು.

"ರೈತರ ಎಲ್ಲ ಸಾಲಗಳನ್ನು ರದ್ದು ಮಾಡಿ. ರೈತನ ಉತ್ಪನ್ನಗಳಿಗೆ ನ್ಯಾಯವಾದಬೆಲೆ ಕೊಡಿ. ಬೇಸಾಯ ಕೂಲಿಗಾರರಿಗೆ 8ರೂ. ಕೂಲಿ ಕೊಡಿ. ರೈತ ವಿರೋಧಿ ಕಾಂಗ್ರೆಸ್-ಜನತಾ ಸರ್ಕಾರಗಳಿಗೆ ಧಿಕ್ಕಾರ. ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸಿಗೆ ಧಿಕ್ಕಾರ. ಕೋಮುವಾದಿ ಜನತಾಪಕ್ಷಕ್ಕೆ ಧಿಕ್ಕಾರ" ಮೂರು ಸಾವಿರಕ್ಕೂ ಮಿಕ್ಕಿದ್ದ ರೈತ ಕಾರ್ಮಿಕರು ಈ ಘೋಷಣೆಗಳನ್ನು ಕೂಗುತ್ತಾ ಶಿಡ್ಲಘಟ್ಟದ ಮುಖ್ಯ ಬೀದಿಗಳಲ್ಲಿ ಕಳೆದ ಸೋಮವಾರ ಮೆರವಣಿಗೆ ನಡೆಸಿದರು.

ಕೆಂಪು ತೋರಣಗಳಿಂದ ಅಲಂಕೃತವಾಗಿದ್ದವು ಶಿಡ್ಲಘಟ್ಟದ ಮುಖ್ಯ ಬೀದಿಗಳು. ಈ ಬೀದಿಗಳನ್ನು ಹಾದು ಹೋದ ಸಾವಿರಾರು ರೈತ-ಕಾರ್ಮಿಕರ ಕೈಗಳಲ್ಲಿ ಕೆಂಬಾವುಟಗಳು – ಬಾಯಲ್ಲಿ ಜನಪರ ಘೋಷಣೆಗಳು. ಅಪರೂಪದ ಈ ನೋಟವನ್ನು ನೋಡಲು ರಸ್ತೆಯ ಎರಡು ಬದಿಗಳಲ್ಲಿ ಶಿಡ್ಲಘಟ್ಟದ ಸಾವಿರಾರು ನಾಗರೀಕರು, ಮಕ್ಕಳು ಮಹಿಳೆಯರಾದಿಯಾಗಿ ಎಲ್ಲರೂ ಶಿಡ್ಲಘಟ್ಟ ಮಾಧ್ಯಮಿಕ ಶಾಲೆಯ ಬಳಿ ಸಂಜೆಯ ಹೊತ್ತಿಗೆ ಸೇರಿದರು.

ಕೋಲಾರಜಿಲ್ಲಾ ರೈತಸಂಘದ 6ನೇ ಸಮ್ಮೇಳನ ಮುಕ್ತಾಯದ ಅಂಗವಾಗಿ ರೈತಸಂಘ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ಸಾರ್ವಜನಿಕ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದವರು ಆಂಧ್ರ ಪ್ರದೇಶ್ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ನರಸಿಂಹರೆಡ್ಡಿ. "ಜಗತ್ತಿನ ಕಮ್ಯುನಿಸ್ಟರು ಫ್ರಾನ್ಸ್ ದೇಶದ ಚಳುವಳಿಯಿಂದ ಪಾಠ ಕಲಿತರು. ಇಂಡಿಯಾದ ಕಮ್ಯುನಿಸ್ಟರು ತೆಲಂಗಾಣ ಚಳುವಳಿಯಿಂದ ಪಾಠ ಕಲಿತರು." ಈ ಮಾತುಗಳನ್ನು ಪ್ರಸ್ತಾಪಿಸುತ್ತಲೇ ಕಾಂ. ನರಸಿಂಹರೆಡ್ಡಿ ಭಾಷಣ ಆರಂಭಿಸಿದರು. ಜನ ಹೋರಾಟಗಳಲ್ಲೆಲ್ಲಾ ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದಂತಹ ತೆಲಂಗಾಣ ರೈತರ ಸಶಸ್ತ್ರ ಹೋರಾಟದಲ್ಲಿ ಕಾಂ. ನರಸಿಂಹರೆಡ್ಡಿ ಸ್ವಯಂ ಭಾಗವಹಿಸಿದವರು. ರೈತರ ಆ ಧೀರ ಹೋರಾಟಕ್ಕೆ ಕಾರಣಗಳನ್ನು ನಿಖರವಾಗಿ ಸಭಿಕರ ಮುಂದಿಟ್ಟರು. 'ಈಗಿನ ಆಂಧ್ರ ಮುಖ್ಯಮಂತ್ರಿ ಡಾ। ಚೆನ್ನಾರೆಡ್ಡಿಯವರ ಕುಟುಂಬಕ್ಕೆ ಸುಮಾರು ಒಂದುವರೆ ಲಕ್ಷ ಎಕರೆಗಳಷ್ಟು ಭೂಮಿ ಇತ್ತು. ಸಾವಿರಾರು ಎಕರೆ ಜಮೀನುಗಳ ಒಡೆಯರಾಗಿದ್ದ ಜಮೀನ್ದಾರರು ಅನೇಕರಿದ್ದರು. ಅವರೆಲ್ಲಾ ರೈತರನ್ನು ಸುಲಿಯುತ್ತಿದ್ದರು. ಈ ಸುಲಿಗೆಯೇ ಆಂಧ್ರ ಮಹಾ ರೈತಸಂಘದ ಉದಯಕ್ಕೆ ಕಾರಣ' ಎಂದರು ರೆಡ್ಡಿ. ಸಂಘಟಿತರಾದ ರೈತರು ಶಸ್ತ್ರ ಹಿಡಿದು ಹೋರಾಟಕ್ಕಿಳಿದರು. ಕಮ್ಯುನಿಸ್ಟರ ಈ ಚಳುವಳಿಯನ್ನು ಮೂರು ದಿವಸಗಳಲ್ಲಿ ಸರ್ಕಾರದ ಸೈನ್ಯದಿಂದ ಸದೆಬಡಿಸುತ್ತೇನೆ ಎಂದು ಆಗಿನ ಗೃಹಮಂತ್ರಿ ಸರ್ದಾರ್ ವಲ್ಲಭಬಾಯ್ ಪಟೇಲರು ಗುಡುಗಿದರು. ಆದರೆ ಧೀರ ರೈತ ಜನಾಂಗ ನಾಲ್ಕು ವರ್ಷಗಳ ಕಾಲ ಚಳುವಳಿಯನ್ನು ನಡೆಸಿದರು. ನಾಲ್ಕು ಸಾವಿರ ರೈತರು ಈ ಹೋರಾಟದಲ್ಲಿ ಪ್ರಾಣತೆತ್ತರು. ರೈತ ಜನತೆಯ ಈ ವೀರ ಹೋರಾಟ, ತ್ಯಾಗ ಬಲಿದಾನಗಳಿಂದ ಲಕ್ಷಾಂತರ ಎಕರೆ ಭೂಮಿಯು ರೈತರ ಪಾಲಿಗೆ ದಕ್ಕಿತು.' ಕಾಂ. ನರಸಿಂಹ ರೆಡ್ಡಿಯವರು ಸಭೆಗೆ ತೆಲಂಗಾಣ ರೈತ ಹೋರಾಟ ಕುರಿತು ಸಂಕ್ಷಿಪ್ತವಾಗಿ ಹೇಳಿದ ಮಾತುಗಳಿವು.

ಜಮೀನ್ದಾರರ ಪರವಾದ ಕಾಂಗ್ರೆಸ್ ಸರ್ಕಾರವು ತನ್ನ ಸೈನ್ಯ ಶಕ್ತಿಯನ್ನು ಜನತೆಯ ಮೇಲೆ ಬಿಟ್ಟು ಅಂದಿನಿಂದ ಆಡಳಿತ ನಡೆಸಿಕೊಂಡು ಬಂದಿತು. ಆದರೆ ಅದರ ಭೂಮಾಲಕ-ಬಂಡವಾಳಗಾರರ ಪರವಾದ ಆರ್ಥಿಕ ನೀತಿಯಿಂದಾಗಿ ಜನರಲ್ಲಿ ಬಡತನ ಹೆಚ್ಚಾಯಿತು. ಜನತೆ ಕಾಂಗ್ರೆಸ್ ಆಳ್ವಿಕೆಯನ್ನು ಕಿತ್ತೆಸೆಯಲು ಮುಂದಾದರು. ಈ ಸಮಯದಲ್ಲಿ ಇಂದಿರಾಗಾಂಧಿಯವರು ಕಾಂಗ್ರೆಸ್ ಪಕ್ಷವನ್ನೇ ಒಡೆದು ಸಮಾಜವಾದಿ ಘೋಷಣೆಗಳನ್ನು ಕೊಡಲು ಶುರುಮಾಡಿದರು. ಅವರ ಕಪಟ ಘೋಷಣೆಗಳ ಪರೀಕ್ಷೆಯೂ

[7ನೇ ಪುಟನೋಡಿ]

ದ. ಕ. ಜಿಲ್ಲಾ ವಾರ್ತಾ ಪತ್ರ

ಮಂಗಳೂರು ವಾಹನ ಸೌಕರ್ಯ :

ಸರ್ಕಾರ ವಹಿಸಿಕೊಳ್ಳಲು ಒತ್ತಾಯ

ಮಂಗಳೂರು ನಗರದಲ್ಲಿನ ವಾಹನ ಸೌಕರ್ಯ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ವಹಿಸಿಕೊಂಡು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಎಸ್. ಎಫ್. ಐ. ನ ದ. ಕನ್ನಡ ಜಿಲ್ಲಾ ಘಟಕ ಸರ್ಕಾರವನ್ನು ಒತ್ತಾಯಿಸಿದೆ. ವಿದ್ಯಾರ್ಥಿ ಫೆಡರೇಷನ್ ಒಂದು ಹೇಳಿಕೆಯನ್ನು ಹೊರಡಿಸಿ ಮಂಗಳೂರು ನಗರದಲ್ಲಿ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ವಾಹನ ಸೌಕರ್ಯವನ್ನು ಒದಗಿಸಿದ ಬಸ್ ಮಾಲೀಕರುಗಳ ಕ್ರಮವನ್ನು ಖಂಡಿಸಿದೆ. ಈ ಸಂಬಂಧದಲ್ಲಿ ಜಿಲ್ಲಾಧಿಕಾರಿಗಳೊಡನೆ ಸೆ. 5 ರಂದು ನಡೆದ ಮಾತುಕತೆಯಲ್ಲಿ ಬಸ್ ಮಾಲೀಕರುಗಳ ಅಸಹಕಾರ ವರ್ತನೆಯನ್ನು ಟೀಕಿಸಲಾಗಿದೆ. ಸೆ. 6 ರಂದು ಬಸ್ ಸೌಕರ್ಯವನ್ನು ನಿಲ್ಲಿಸಿ ಸಾರ್ವಜನಿಕರನ್ನು ವಿದ್ಯಾರ್ಥಿಗಳ ವಿರುದ್ಧ ಎತ್ತಿಕಟ್ಟುವ ಪ್ರಯತ್ನ ನಡೆಸಿದ ಬಸ್ ಮಾಲೀಕರ ಕುತಂತ್ರವನ್ನು ಬಯಲು ಮಾಡಿರುವ ಎಸ್. ಎಫ್. ಐ., ಸಾರ್ವಜನಿಕರ ಸಹಕಾರ ಬಯಸಿದೆ. ಸೆ. 7 ರಂದು ಪೋಲೀಸ್ ರಕ್ಷಣೆಯಲ್ಲಿ ವಾಹನ ಸಂಚಾರವನ್ನು ವ್ಯವಸ್ಥೆ ಮಾಡಿದ್ದ ಬಸ್ ಮಾಲೀಕರುಗಳ ಕ್ರಮವನ್ನು ಉಗ್ರವಾಗಿ ಪ್ರತಿಭಟಿಸಿರುವ ಎಸ್. ಎಫ್. ಐ., ಮಂಗಳೂರಿನ ವಾಹನ ಸೌಕರ್ಯವನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಒತ್ತಾಯಿಸಿದೆ. ○

ಕೋಡಿಯಲ್ಲಿ ಯುವಕ ಸಮಿತಿ ರಚನೆ

ದ. ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೋಕಿನ ಕೋಡಿ ಎಂಬ ಹಳ್ಳಿಯಲ್ಲಿ ಯುವಕ ಸಮಿತಿಯೊಂದನ್ನು ರಚಿಸಲಾಗಿದೆ. ಸಮಿತಿಗೆ ತಿಮ್ಮ ಅವರು ಅಧ್ಯಕ್ಷರಾಗಿ ದೇವರಾಜ್ ಕಾರ್ಯದರ್ಶಿಯಾಗಿ, ಸುರೇಶ್ ಕೋಶಾಧಿಕಾರಿಯಾಗಿ ಹಾಗೂ ಶಿವಾನಂದ, ರತ್ನಾಕರ, ಸೀತಾರಾಮ, ಪ್ರಭಾಕರ, ಕರಿಯ, ಬಸವ ಅವರುಗಳನ್ನು ಸಮಿತಿಯ ಸದಸ್ಯರುಗಳನ್ನಾಗಿ ಸರ್ವಾನುಮತದಿಂದ ಆರಿಸಲಾಯಿತು.

ಯುವಕ ಸಮಿತಿ ರಚನೆ ಸಮಾರಂಭದ ಅಧ್ಯಕ್ಷತೆಯನ್ನು ಕುಂದಾಪುರ ತಾಲ್ಲೋಕು ಯುವಕ ಸಮಿತಿ ಅಧ್ಯಕ್ಷ ಕಾಂ. ವೆಂಕಟೇಶ್ ವಹಿಸಿದ್ದರು. ಯುವಜನರನ್ನು ಉದ್ದೇಶಿಸಿ ತಾಲ್ಲೋಕಿನ ಎಸ್. ಎಫ್. ಐ. ಕಾರ್ಯದರ್ಶಿ ಜೈಕುಮಾರ್ ಮಾತನಾಡಿದರು. ಜೋನ್ ಡಿ. ಸೋಜ, ಕಾಂ. ಮಹಾಬಲದೇವಡಿಗ ಅವರೂ ಸಭೆಯಲ್ಲಿ ಮಾತನಾಡಿದರು. ●

ನಿಧನ

ಮಂಗಳೂರು ಸಮೀಪದ ಮರೋಳಿಯಲ್ಲಿನ ಕ್ಯಾಶುನಟ್ ಅಂಡ್ ಅಲೈಡ್ ವರ್ಕರ್ಸ್ ಯೂನಿಯನ್ ಉಪಾಧ್ಯಕ್ಷೆ ಕಾಂ. ಸೇಸಮ್ಮ ಅವರ ಪತಿ ಕಾಂ. ಎಂ. ಅಪ್ಪು ಅವರು ಸೆ. 1ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಬೀಡಿಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಭೂಮಿ ಬ್ಯಾಂಕ್ ನೌಕರರ ಮುಷ್ಕರ

ಹೆಚ್ಚಿನ ವೇತನ ಹಾಗೂ ಮತ್ತಿತರ ಸೌಲಭ್ಯಗಳಿಗಾಗಿ ರಾಜ್ಯದ 176 ಪ್ರಾಥಮಿಕ ಭೂಅಭಿವೃದ್ಧಿ ಬ್ಯಾಂಕ್‌ನ ಸುಮಾರು 2500 ನೌಕರರು ಕಳೆದ 5ನೇ ತಾರೀಖಿನಿಂದ ನಡೆಸುತ್ತಿರುವ ಮುಷ್ಕರದಲ್ಲಿ ದ. ಕನ್ನಡ ಜಿಲ್ಲೆಯ ಎಲ್ಲ ತಾಲ್ಲೋಕುಗಳಲ್ಲಿನ ಭೂಬ್ಯಾಂಕ್ ನೌಕರರು ಪಾಲ್ಗೊಳ್ಳುತ್ತಿದ್ದಾರೆ ಎಂದು ನಮ್ಮ ದ. ಕನ್ನಡ ಜಿಲ್ಲೆಯ ವರದಿಗಾರರು ವರದಿಮಾಡಿದ್ದಾರೆ.

ತಮ್ಮ ಬೇಡಿಕೆಗಳು ಈಡೇರುವ ತನಕವೂ ಮುಷ್ಕರವನ್ನು ಮುಂದುವರಿಸುತ್ತೇವೆಂದು ನೌಕರರು ತಿಳಿಸಿದ್ದಾರೆಂದು ವರದಿ ಹೇಳಿದೆ. ○

ರೈತ ಕಾರ್ಮಿಕರ ಮಾರ್ಗದರ್ಶನವೇ ದೇಶದ ಭದ್ರತೆಗೆ ಬುನಾದಿ

[6ನೇ ಪುಟದಿಂದ]

ಮುಗಿದು ಹೋಯಿತು. ಆಕೆಯನ್ನು ಪರೀಕ್ಷಿಸಿದ ನಂತರವೇ, ಜನತೆಯು 1977ರಲ್ಲಿ ಜನತಾಪಕ್ಷವನ್ನು ಅಧಿಕಾರಕ್ಕೆ ತಂದರು' ಎಂದು ವಿವರಿಸಿದರು ಕಾಂ. ರೆಡ್ಡಿ. ಆದರೆ ಆ ನಂತರ ಜನತಾದವರು ಸ್ವಾರ್ಥದಿಂದಾಗಿ ತಮ್ಮ ತಮ್ಮೊಳಗೇ ಕಚ್ಚಾಡಿಕೊಂಡು ಜನಹಿತ ಮರೆತರುಎಂಬುದನ್ನುನಾವೆಲ್ಲಾ ಅನುಭವಿಸಿದ್ದೇವೆ ಎಂದು ನೆನಪು ಮಾಡಿಕೊಟ್ಟ ರೆಡ್ಡಿಯವರು, ಈಗ ಮತ್ತೆ ಅವಕಾಶಗಳನ್ನು ಕೇಳುತ್ತಿರುವ ಇಂದಿರಾಗಾಂಧಿಯನ್ನು ಜನ ನಂಬುವುದು ಹೇಗೆಂದು ಪ್ರಶ್ನಿಸಿದರು. ಹನ್ನೊಂದು ವರ್ಷಗಳ ದೀರ್ಘಕಾಲ ಸಿಕ್ಕಿದ್ದ ಅವಕಾಶದಲ್ಲಿ ಇವರು ಮಾಡಿದ್ದೇನು? ಸಂಘಸಂಸ್ಥೆಗಳನ್ನು ನಾಶಮಾಡಿದ್ದು, ಕಾರ್ಮಿಕರ ಬೋನಸ್ ಕಿತ್ತುಕೊಂಡದ್ದು ಮತ್ತು ಜನತೆಯ ಸ್ವಾತಂತ್ರ ಅಪಹರಣ ಮಾಡಿದ್ದಲ್ಲವೇನು ಎಂದು ರೆಡ್ಡಿಯವರು ಪ್ರಶ್ನಿಸಿ, ಇಂತಹ ನಾಯಕಿಗೆ ಮತ್ತೊಂದು ಅವಕಾಶವನ್ನು ಕೊಡಬೇಕೆಂಬುದನ್ನು ಜನತೆಯೇ ತೀರ್ಮಾನಿಸಬೇಕು ಎಂದು ಹೇಳಿದರು.

ಭೂ ಸುಧಾರಣೆಯಿಂದ ಮಾತ್ರ ರೈತರ ಉದ್ಧಾರವಾಗದು :

ಭೂ ಸುಧಾರಣೆಯಿಂದ ಮಾತ್ರ ರೈತನ ಬದುಕು ಹಸನಾಗದು. ಆತನಿಗೆ ಭೂಮಿ ಕೊಟ್ಟಮೇಲೆ ಉಳುಮೆಗೆ ಉತ್ತಮ ಬೀಜ-ಗೊಬ್ಬರ,ವ್ಯವಸಾಯ ಉಪಕರಣಗಳು ನೀರಾವರಿ ಸೌಲಭ್ಯ ಮತ್ತು ಆತ ಬೆಳೆದಂತಹ ಬೆಳೆಗೆ ಲಾಭದಾಯಕ ಬೆಲೆ ಸಿಕ್ಕುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕು. ಹೀಗೆ ಮಾಡಿದಾಗಲೇ ರೈತನ ಬದುಕು ಸುಧಾರಿಸೀತು.' ಈ ಮಾತುಗಳನ್ನು ಹೇಳಿದವರು ಕರ್ನಾಟಕ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್.

ಕೋಲಾರ ಜಿಲ್ಲೆಯಾದ್ಯಂತ ಬಂದು ಸೇರಿದ್ದ ರೈತ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ರೈತಸಂಘ ಕಾರ್ಯದರ್ಶಿಗಳು, ಕಳೆದ 30 ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷವು ಛಿದ್ರಗೊಂಡಿದೆ, ಕಳೆದ 28 ತಿಂಗಳುಗಳಲ್ಲಿ ಜನತಾಪಕ್ಷವೂ ಛಿದ್ರಗೊಂಡು ದೇಶದ ರಾಜಕೀಯ ಮುಂದಾಳತ್ವ ವಿಫಲಗೊಂಡಿದೆ ಎಂದರು. ಈ ಎರಡು ಪಕ್ಷಗಳ ಆಡಳಿತದಿಂದ ಕೋಟಿಕೋಟಿ ಜನರ ಬದುಕು ಹಸನಾಗಲಿಲ್ಲ-ಹಸನಾಗಿದ್ದು ಕೆಲವೇ ಕೆಲವು ಬಂಡವಾಳಿಗರ ಮತ್ತು ಜಮೀನ್ದಾರರ ಬದುಕು ಎಂದರು ಕಾಂ. ರಾವ್. ಈ ಪಕ್ಷಗಳ ಕೊಡುಗೆ, ಭಾರತವು ಪ್ರಪಂಚದಲ್ಲೇ ಅತಿ ಬಡರಾಷ್ಟ್ರವಾಗಿ ಮೆರೆಯುವಂತಾಗಿದ್ದು"—ರೈತ ಸಂಘದ ಕಾರ್ಯದರ್ಶಿಗಳ, ಕಾಂಗ್ರೆಸ್-ಜನತಾ ಸರ್ಕಾರಗಳನ್ನು ಗೇಲಿ ಮಾಡಿದ ರೀತಿ ಇದು.

ಅಭದ್ರತೆಯ ಅಂಚಿಗೆ ಹೋಗುತ್ತಿರುವ ರಾಷ್ಟ್ರವನ್ನು ಪಾರುಮಾಡಬೇಕಾದರೆ ರೈತ ಕಾರ್ಮಿಕರು ಮಾರ್ಗದರ್ಶನ ಮಾಡಬೇಕು. ಆ ನಿಟ್ಟಿನಲ್ಲಿ ಮುನ್ನಡೆಯಲು ದುಡಿಯುವ ಜನರ ಸಂಘಟನೆಗಳಲ್ಲೊಂದಾದ ರೈತ ಸಂಘವನ್ನು ಬಲಗೊಳಿಸಿ ಎಂದು ಕಾಂ. ರಾಮಚಂದ್ರ ರಾವ್ ಮನವಿ ಮಾಡಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ರೈತಸಂಘದ ಅಧ್ಯಕ್ಷ ಕಾಂ. ಮುಗುವಾಳಪ್ಪನವರುಸರ್ಕಾರ ಗ್ರಾಮೀಣ ಬಡ ಜನತೆಗೆ ಈಗ ಕೊಡುತ್ತಿರುವ ಮನೆಗಳು ಸಾಲದೆಂದೂ ಇವುಗಳ ಪ್ರಮಾಣವನ್ನು ಜಿಲ್ಲೆಗೆ ಕನಿಷ್ಟ 5000 ಕ್ಕಾದರೂ ಏರಿಸಬೇಕೆಂದು ಒತ್ತಾಯಿಸಿದರು. ಬಂಜರು ಭೂಮಿಯನ್ನು ಸರ್ಕಾರವು ರೈತಸಂಘಕ್ಕೆ ಹಂಚದೇ ಇದ್ದುದರಿಂದಲೇ ರೈತಸಂಘವು ಭೂಗ್ರಹಣ ಚಳುವಳಿಯನ್ನು ಕೈಗೆತ್ತಿಕೊಂಡದ್ದು ಎಂದು ಹೇಳಿ ಚಳುವಳಿಯನ್ನು ಮುಂದುವರಿಸುವುದಾಗಿ ಘೋಷಿಸಿದರು.

ಸಭೆಯನ್ನು ಉದ್ದೇಶಿಸಿ ರಾಜ್ಯ ರೈತ ಸಂಘದ ಖಜಾಂಚಿ ಕಾಂ. ಪಿ. ಜಗನ್ನಾಥ್, ಕೋಲಾರ ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಆರ್. ವೆಂಕಟರಾಮಯ್ಯ, ವಕೀಲ ರಾಮಕೃಷ್ಣರೆಡ್ಡಿಯವರು ಮಾತನಾಡಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಘಟಕದಕಾರ್‍ಯದರ್ಶಿ ಕಾಂ. ಶೌರಿದಾಸ್ ಅವರು ಪಕ್ಷದ ಪರವಾಗಿಶುಭಾಶಯಗಳನ್ನು ಕೋರಿದರು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಜಿ. ಪಾಪಣ್ಣ ವಹಿಸಿದ್ದರು. ಕಾಂ. ಜಿ. ದೊರೆಸ್ವಾಮಿ ವಂದಿಸಿದರು.

ರೈತ ಸಮ್ಮೇಳನದಲ್ಲಿ ಅಂಗೀಕರಿಸಲಾದ 27 ನಿರ್ಣಯಗಳನ್ನು ಸಭೆಗೆ ತಿಳಿಸಲಾಯಿತು. ಮುಖ್ಯ ನಿರ್ಣಯಗಳು:–

1. ರೈತ ಬೆಳೆದ ಪದಾರ್ಥಗಳಿಗೆ ನ್ಯಾಯಬೆಲೆ ಸಿಕ್ಕಬೇಕು.
2. ಗುಜರಾತಿನ ಮೋರ್ವಿ ನಗರದಲ್ಲಿ ನಡೆದ ದುರಂತದಲ್ಲಿ ನೊಂದವರಿಗೆ ಸರ್ಕಾರ ಪೂರ್ಣ ಪರಿಹಾರ ಕೊಡಬೇಕು.
3. ಕೋಲಾರ ಜಿಲ್ಲೆಯನ್ನು ಕ್ಷಾಮ ಪೀಡಿತ ಪ್ರದೇಶವೆಂದು ಸಾರಬೇಕು.
4. ಬೆಂಗಳೂರು-ಬಂಗಾರಪೇಟೆ ರೈಲುಮಾರ್ಗವನ್ನು ಮೀಟರ್‌ಗೇಜ್ ಆಗಿ ಪರಿವರ್ತಿಸಬೇಕು.
5. ಕೃಷಿಕಾರ್ಮಿಕರಿಗೆ 8 ರೂಪಾಯಿ ಕನಿಷ್ಟ ಕೂಲಿ ಸಿಕ್ಕಬೇಕು. ●

'ಜನಶಕ್ತಿ ಕಲಾವೃಂದ' ವಾರ್ಷಿಕ ಸಭೆ

ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲಾಳದ 'ಜನಶಕ್ತಿ ಕಲಾವೃಂದ'ದ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಉಲ್ಲಾಳದಲ್ಲಿ ಸೇರಿ, ಸಂಘದ ಕಳೆದ ಸಾಲಿನ ಚಟುವಟಿಕೆಗಳ ವಿಮರ್ಶೆ ನಡೆಸಿತು. ಸಭೆಯ ಅಧ್ಯಕ್ಷತೆಯನ್ನು ಯು. ಪಿ. ನಾರಾಯಣ ಅವರು ವಹಿಸಿದ್ದರು. ಸಂಘದ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳು ಜಂಟಿಯಾಗಿ ಮಂಡಿಸಿದ ಕಳೆದ ವರ್ಷದ ಲೆಕ್ಕಪತ್ರಗಳಿಗೆಮಹಾಸಭೆಯುಮಂಜೂರಾತಿ ನೀಡಿತು. ಸಭೆಯನ್ನು ಉದ್ದೇಶಿಸಿ ಧನಂಜಯ ಮಂಕುಡೆ, ಯು. ಬಾಲಕೃಷ್ಣ, ಯು. ಪಾಂಡುರಂಗ ಬಂಗೇರ, ಯು. ವೆಂಕಪ್ಪ, ಯು. ಜಯಾನಂದ, ಯು. ವಿಶ್ವನಾಥ ಬಂಗೇರ ಹಾಗೂ ಯು. ಲಕ್ಷಣ ಟೈಲರ್ ಅವರು ಮಾತನಾಡಿ ಸಂಘ ಸಂಸ್ಥೆಗಳ ಪ್ರಾಮುಖ್ಯತೆಯನ್ನು ವಿವರಿಸಿದರು.

79-80ನೇ ಸಾಲಿಗೆ ಸಂಘದ ಅಧ್ಯಕ್ಷರಾಗಿ ಧನಂಜಯ ಮಂಕುಡೆ, ಉಪಾಧ್ಯಕ್ಷರಾಗಿ ಯು.ಲಕ್ಷಣ ಟೈಲರ್, ಕಾರ್ಯದರ್ಶಿಯಾಗಿ ಯು. ಕೆ.ಪೂವಪ್ಪ, ಯು. ಪುರುಷೋತ್ತಮ ಜಂಟೀ ಕಾರ್ಯದರ್ಶಿಯಾಗಿ ಹಾಗೂ ಯು. ಕೆ. ಗೋಪಾಲ ಅವರು ಕೋಶಾಧಿಕಾರಿಯಾಗಿ ಸರ್ವಾನುಮತದಿಂದ ಆಯ್ಕೆಗೊಂಡರು. ●

ಪಕ್ಷದ ಬೆಂಬಲಿಗರಿಂದ ರಸ್ತೆ ನಿರ್ಮಾಣ

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೋಕಿನ ಹಳ್ಳಿಗಳಾದ ತಳ್ಳಿಕಂಡ ಮತ್ತು ಮದ್ವಾರ್ ನಡುವಿನ 1 ಕಿ.ಮೀ. ರಸ್ತೆ ನಿರ್ಮಾಣದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಬೆಂಬಲಿಗರು ಮತ್ತು ಕಾರ್ಯಕರ್ತರು ತೊಡಗಿ ರಸ್ತೆ ನಿರ್ಮಾಣ ಕೆಲಸವನ್ನು ಸೆ. 2 ರಂದು ಪೂರೈಸಿದರು. ಗ್ರಾಮೀಣ ಆಗತ್ಯದ ಈ ಸಾಮಾಜಿಕ ಸೇವೆಯಲ್ಲಿ 25 ಜನ ಯುವಕರು ಭಾಗವಹಿಸಿದ್ದರು. ○

ಕ್ರಿಯಾಶೀಲರಾಗಲು ವಿದ್ಯಾರ್ಥಿಗಳಿಗೆ ಮನವಿ

ಸಮಾಜದ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳು ಜಾಗೃತಗೊಂಡು ಕ್ರಿಯಾಶೀಲರಾಗಬೇಕು ಎಂದು ದ. ಕನ್ನಡ ಜಿಲ್ಲೆಯ ಎಸ್. ಎಫ್. ಐ. ಘಟಕದ ಅಧ್ಯಕ್ಷ ರಾಘವ ಅವರು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದ್ದಾರೆ. ಸೆಪ್ಟೆಂಬರ್ 2ರಂದು ಎಸ್. ಎಫ್. ಐ. ನ ಮಂಗಳೂರು ಸಮಿತಿಯು, ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಶಿಕ್ಷಣ ತರಗತಿಯ ಅಧ್ಯಕ್ಷತೆಯನ್ನು ಕಾಂ. ಎಚ್. ಎಮ್. ರಾವ್ ಅವರು ವಹಿಸಿದ್ದರು. ಕಾಂ. ರಾವ್ ಮಾತನಾಡಿ, ಹೋರಾಟಗಳಿಲ್ಲದೆ ಯಾವುದೇ ಸಮಸ್ಯೆಗಳ ಪರಿಹಾರ ಸಾಧ್ಯವಿಲ್ಲ ಎಂಬುದು ನಮ್ಮ ಅನುಭವವಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಹೋರಾಟದ-ಬಂಡಾಯದ ಮನೋಭಾವ ಬೆಳೆಸಿಕೊಳ್ಳಬೇಕೆಂದರು. ಸಭೆಯಲ್ಲಿ ಕಾಂ. ಹರಿಶ್ಚಂದ್ರ ಅವರೂ ಮಾತನಾಡಿದರು.

ಎಸ್. ಎಫ್. ಐ.ನ ಮಂಗಳೂರು ತಾಲ್ಲೋಕು ಸಮಿತಿಯ ಕಾರ್ಯದರ್ಶಿ ಕಾಂ. ಮೋಹನಚಂದ್ರ ಸ್ವಾಗತಿಸಿದರು. ಅಧ್ಯಕ್ಷ ಕಾಂ. ಉಮೇಶ್ ವಂದಿಸಿದರು. ●

ಯಂಗ್‌ಟರ್ಕ್ ಚಂದ್ರಶೇಖರ್ ನಡೆದುಬಂದ ಹಾದಿ

[ಒಂದನೇ ಪುಟದಿಂದ]

ಬಹುಗುಣ, ಮಧುಲಿಮಯೆ, ರಾಜ್ ನಾರಾಯಣ್ ಮುಂತಾದವರು ಬಂಡೆದ್ದುದನ್ನು ಜಾತ್ಯಾತೀತ ಶಕ್ತಿಗಳು ಎಲ್ಲ ಕಡೆ ಸ್ವಾಗತಿಸಿದವು.

ಜನತಾಪಕ್ಷದೊಳಗಿದ್ದು ಕೊಂಡು ಆರ್. ಎಸ್. ಎಸ್. ಸಂಬಂಧವನ್ನು ಸದಾ ಕಾಪಾಡಿಕೊಂಡು ಬಂದು, ಆ ಕೋಮುವಾದಿ ಸಂಘಟನೆಯನ್ನು ಬಲಿಷ್ಠಗೊಳಿಸುತ್ತಿದ್ದುದನ್ನು ಬಯಲಿಗೆಳೆದವರು ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ. ಈ ಕಾರಣಕ್ಕಾಗೇ ಜನತಾ ಅಧ್ಯಕ್ಷ ಚಂದ್ರಶೇಖರರಿಗೆ ಕಮ್ಯುನಿಸ್ಟರ ಮೇಲೆ ಕೆಂಡದಂತಹ ಕೋಪ ಬಂದಿದೆ. ಜನಸಂಘ-ಆರ್. ಎಸ್. ಎಸ್. ಗಳು ಇದ್ದಂತಹ ಸಮ್ಮಿಶ್ರ ಸರ್ಕಾರಗಳಲ್ಲಿ (ಬಿಹಾರ, ಯು. ಪಿ. ಮುಂತಾದೆಡೆ) ಈ ಕಮ್ಯುನಿಸ್ಟರು 1967ರಲ್ಲಿ ಪಾಲ್ಗೊಳ್ಳಲಿಲ್ಲವೆ? ಆಗ ಇವರ ಪ್ರಜ್ಞೆ ಸತ್ತು ಹೋಗಿತ್ತೇನು? ಇದು ಜನತಾ ಅಧ್ಯಕ್ಷ ಚಂದ್ರಶೇಖರ್ ಹಾಗೂ ಜನಸಂಘ-ಆರ್. ಎಸ್. ಎಸ್. ನಾಯಕ ಅದ್ವಾನಿಯವರ ಪ್ರಶ್ನೆ. 1967 ರಲ್ಲಿ ಬಿಹಾರ್ ಮತ್ತು ಯು. ಪಿ. ಮುಂತಾದ ಸಮ್ಮಿಶ್ರ ಸರ್ಕಾರಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದವರು ಸೇರಿರಲಿಲ್ಲ. ಇದು ನಮ್ಮ ಉತ್ತರ. ಬಹುದೀರ್ಘ ಕಾಲದಿಂದ ರಾಜಕಾರಣದಲ್ಲಿರುವ ಚಂದ್ರಶೇಖರ್ ಮತ್ತು ಅದ್ವಾನಿಯವರಿಗೆ ಇದು ಗೊತ್ತಿಲ್ಲವೆ? ಅವರ "ದುರ್ಬಲ ಜ್ಞಾಪಕ ಶಕ್ತಿಗೆ" ನಮ್ಮ ಸಹಾನುಭೂತಿ ಇದೆ.

ಆದರೆ ಒಂದನ್ನು ಮಾತ್ರ ಸ್ಪಷ್ಟಪಡಿಸಲು ಸಿ. ಪಿ. ಐ. (ಎಂ) ಇಚ್ಛಿಸುತ್ತದೆ. ಅದೆಂದರೆ ಇಂದಿರಾಗಾಂಧಿಯ ಸರ್ವಾಧಿಕಾರದ ವಿರುದ್ಧದ ಹೋರಾಟದಲ್ಲಿ ನಾವು ಜನಸಂಘದವರೊಂದಿಗೆ ಸೇರಿಕೊಂಡಿದ್ದರಲ್ಲಿ ನಮಗೆ ಯಾವ ತಪ್ಪೂ ಕಾಣಿಸದು. ಆದ್ದರಿಂದಲೇ, ಜನಸಂಘವೂ ಒಂದು ಪ್ರಮುಖ ಘಟಕವಾಗಿದ್ದ ಜನತಾಪಕ್ಷದ ಸರ್ಕಾರವನ್ನು ನಾವು ಕೇಂದ್ರದಲ್ಲಿ ಸ್ವಾಗತಮಾಡಿದೆವು.

ಇಷ್ಟಾದ ಮಾತ್ರಕ್ಕೆ ಜನಸಂಘ-ಆರ್. ಎಸ್. ಎಸ್.ಗಳ ವಿರುದ್ಧ ಅವರು ಪ್ರತಿಪಾದಿಸುತ್ತಿದ್ದ "ಹಿಂದೂ ರಾಷ್ಟ್ರ" ನಿರ್ಮಾಣದ ವಿಚಾರಗಳ ವಿರುದ್ಧ ಅವರ ಕೋಮುವಾದಿನೀತಿಗಳ ವಿರುದ್ಧ ನಮ್ಮ ಹೋರಾಟ ಎಂದೂ ನಿಲ್ಲಲಿಲ್ಲ. ಈ ಹಿಂದೂ ಜಾತ್ಯಾಂಧರ-ಮತಾಂಧರ ಶಕ್ತಿ ಜಾಸ್ತಿಯಾಗತೊಡಗಿತ್ತು. ಆರ್. ಎಸ್. ಎಸ್ಸಿಗರ "ಶಾಕೆ"ಗಳ ಕಾಟ ಜನತೆಯ ಮೇಲೆ ಜಾಸ್ತಿಯಾಗತೊಡಗಿತು. ಅವರು ಇಷ್ಟೊಂದು ಬಲಿಷ್ಠರಾದದ್ದು ಸರ್ಕಾರದ ಸಹಾಯ ಪಡೆದು ಸರ್ಕಾರದಲ್ಲಿನ ತಮ್ಮ ಸ್ಥಾನಗಳ ದುರುಪಯೋಗ ಮಾಡಿಕೊಂಡರು ಅವರು. ಈ ಜನವಿರೋಧಿಗಳ ವಿರುದ್ಧ ನಾವು ಬಂಡೇಳಲೇಬೇಕಾಯಿತು. ಬಂಡಾಯ ಹೂಡಿದೆವು. ವಾಸ್ತವ ಸಂಗತಿಯೆಂದರೆ ಆರ್. ಎಸ್. ಎಸ್ಸಿಗರ ಕೊಲೆಗಳಿಗೆ ನಮ್ಮ ಪಕ್ಷದ ಕಾರ್ಯಕರ್ತರೇ ಎಷ್ಟೋ ಸ್ಥಳಗಳಲ್ಲಿ ಈಡಾಗಿದ್ದಾರೆ.

ಈ ಎಲ್ಲ ವಿಷಯಗಳನ್ನು ಸಾರ್ವಜನಿಕರ ಎದುರು ಹೇಳುವುದರ ಜೊತೆಗೆ ನಾವು ಜನತಾ ಅಧ್ಯಕ್ಷ ಚಂದ್ರಶೇಖರ್ ಅವರೊಡನೆಯೂ ಅನೇಕ ಸಲ ಮಾತುಕತೆ ನಡೆಸಿದೆವು. ಆರ್.ಎಸ್.ಎಸ್.-ಜನಸಂಘೀಯರ ಈ ಕೃತ್ಯಗಳನ್ನು ನಿಲ್ಲಿಸಬೇಕೆಂದು ನಾವು ಚಂದ್ರಶೇಖರಿಗೆ ಮನವಿ ಮಾಡಿದೆವು. ಇಲ್ಲದಿದ್ದರೆ ಜನತಾಪಕ್ಷ ಜನತೆಯಿಂದಲೇ ಕಣ್ಮರೆಯಾಗಿ ಮತ್ತೆ ಸರ್ವಾಧಿಕಾರಿ ಶಕ್ತಿಗಳು ಲಾಭ ಪಡೆಯುತ್ತವೆ ಎಂದು ಎಚ್ಚರಿಕೆ ನೀಡಿದೆವು.

ದುರಾದೃಷ್ಟವಶಾತ್ ನಮ್ಮ ಮನವಿಗಳು ಏನೂ ಫಲಕೊಡಲಿಲ್ಲ. ಯಂಗ್‌ಟರ್ಕ್ ಚಂದ್ರಶೇಖರ್ ಅವರೂ ಸೇರಿದಂತೆ ಅವರ ಸಂಗಾತಿಗಳು, ಮಧು ದಂಡವತೆ ನೇತೃತ್ವದ ಸಮಾಜವಾದಿಗಳ ಒಂದು ಬಣ, ಜಗಜೀವನ್‌ರಾಮ್ ನೇತೃತ್ವದ ಸಿ. ಎಫ್. ಡಿ. ಯ ಮತ್ತೊಂದು ಬಣ ಹಾಗೂ ಕೆಲವು ಸಂಸ್ಥಾ ಕಾಂಗ್ರೆಸ್ಸಿಗರು, ಆರ್. ಎಸ್. ಎಸ್. ಜನಂಘದ ಅಪಾಯದ ವಿಷಯವನ್ನು ಅಷ್ಟಾಗಿ ತಲೆಗೆ ಹಚ್ಚಿಕೊಳ್ಳಬಾರದೆಂದು ನಿರ್ಧರಿಸಿದರು. ಜಾತ್ಯಾತೀತತೆಯನ್ನು ರಾಷ್ಟ್ರದಲ್ಲಿ ಕಾಪಾಡಿಕೊಂಡು ಬರುವುದಕ್ಕಿಂತ ಹೆಚ್ಚಿನ ಬೆಲೆಯನ್ನು ಆರ್. ಎಸ್. ಎಸ್. ಜನಸಂಘದಂತಹ ಕೋಮುವಾದಿ ಶಕ್ತಿಗಳಿಗೇ ಇವರು ಕೊಟ್ಟರು. ಪರಿಣಾಮ ಏನಾಯಿತು. ಜನತಾಪಕ್ಷ ಒಡೆದು ಜನತಾ (ಎಸ್) ರೂಪುಗೊಂಡದ್ದು ಮಾತ್ರವಲ್ಲ ಆರ್. ಎಸ್. ಎಸ್ಸಿಗರ ಅವಳಿ ಸದಸ್ಯತ್ವದ ಪ್ರಶ್ನೆಯು ಇನ್ನೂ ಜನತಾ ಪಕ್ಷವನ್ನು ಕಾಪಾಡುತಲೇ ಇದೆ.

ಆರ್. ಎಸ್. ಎಸ್ಸಿಗರ ಅವಳಿ ಸದಸ್ಯತ್ವದ ಪ್ರಶ್ನೆಯು ಒಂದು ಸಮಸ್ಯೆಯೇ ನಲ್ಲ ಎಂದು ಈಗಲೂ ಪ್ರತಿಪಾದಿಸಲಾಗುತ್ತಿರುವ ಮಾತುಗಳಿಗೆ ಯಾವ ಬೆಲೆಯೂ ಇಲ್ಲ. ಆರ್. ಎಸ್. ಎಸ್. ನವರೇ ಅದಕ್ಕೆ ಈಗ ಹೊಸದೊಂದು ಪರಿಹಾರ ಸೂಚಿಸಿದ್ದಾರಂತೆ. "ಹಿಂದೂ ರಾಷ್ಟ್ರ ನಿರ್ಮಾಣ"ದ ಅವರ ನಂಬಿಕೆಯನ್ನು ಅವರು ಬಿಟ್ಟುಕೊಡುತ್ತಾರಂತೆ! ಭಾರತರಾಷ್ಟ್ರ ನಿರ್ಮಾಣದಲ್ಲಿ ಮಾತ್ರ ಅವರು ತೊಡಗುತ್ತಾರಂತೆ. ಆರ್. ಎಸ್. ಎಸ್. ನವರ ಈ ಪರಿಹಾರವನ್ನು ಚಂದ್ರಶೇಖರ್ ಒಪ್ಪುತ್ತಾರೆಯೆ? ಅವರ ಯಂಗ್‌ಟರ್ಕ್ ಸಂಗಾತಿಗಳು ಒಪ್ಪುತ್ತಾರೆಯೇ? ಈ ಪ್ರಶ್ನೆಗಳಿಗೆ ಚಂದ್ರಶೇಖರ್ ಉತ್ತರ ಕೊಡಬೇಕು. ಆರ್. ಎಸ್. ಎಸ್.ನ ಮುಖ್ಯಸ್ಥರಾಗಿದ್ದ ಗುರೂಜಿಗೋಳ್ವಾಲ್ಕರ ಅವರ ಕುಖ್ಯಾತ ಗ್ರಂಥ "ಚಿಂತನ ಗಂಗ" ಚಂದ್ರಶೇಖರ್‌ಗೆ ಗೊತ್ತಿಲ್ಲವೆ? "ಹಿಂದೂರಾಷ್ಟ್ರ ನಿರ್ಮಾಣ"ಕ್ಕೆ ಬದ್ಧವಾದ ಈ ಕುಖ್ಯಾತ ಗ್ರಂಥವು ಇಂದಿಗೂ ಆರ್. ಎಸ್. ಎಸ್ಸಿಗರ ಬೈಬಲ್ ಆಗಿಲ್ಲದೆ? ಇದರ ವ್ಯಾಖ್ಯಾನವನ್ನು ಬೇರೆ ರೀತಿಯಲ್ಲಿ ಮಾಡಲು ಪ್ರಯತ್ನಿಸಿದ ಜನಸಂಘದ ನಾಯಕ ಅಟಲಬಿಹಾರಿ ವಾಜಪೇಯಿಯವರನ್ನು ಇಡೀ ಆರ್. ಎಸ್. ಎಸ್. ನವರು ಖಂಡಿಸಲಿಲ್ಲವೆ?

ಚಂದ್ರಶೇಖರ್ ಮತ್ತು ಅವರ ಜನಸಂಘೇತರರಾದ ಅವರ ಸಂಗಾತಿಗಳೆಲ್ಲರೂ ಈಗ ನಿರ್ಧಾರ ಮಾಡಲೇಬೇಕಾದ ಸಮಯ ಬಂದಿದೆ. ಕೋಮುವಾದಿಗಳಿಂದ ಬೇರ್ಪಡಬೇಕೆ ಅಥವಾ ಅವರೊಂದಿಗೆ ರಾಜಿ ಮಾಡಿಕೊಳ್ಳಬೇಕೆ ಎಂಬ ಪ್ರಮುಖ ನಿರ್ಧಾರ ಅದು. ಜಾತ್ಯಾತೀತ ಶಕ್ತಿಗಳಾದ ಜನತಾ (ಎಸ್), ಕಾಂಗ್ರೆಸ್ ಪಕ್ಷಗಳನ್ನು ಸೇರಿಕೊಳ್ಳಲು ಒಂದುಕಾಲದ ಪ್ರಗತಿಪರ ಯಂಗ್‌ಟರ್ಕ್ ಚಂದ್ರಶೇಖರ್ ಮತ್ತು ಅವರ ಸಂಗಾತಿಗಳು ತಯಾರಿದ್ದಾರೊ? ಕೋಮುವಾದಿಗಳ ವಿರುದ್ಧ ನಿರಂತರ ಹೋರಾಟ ಮಾಡಿಕೊಂಡು ಬರುತ್ತಿರುವ ಎಡಶಕ್ತಿಗಳ ಜೊತೆಗೂಡಲು ಅವರು ಸಿದ್ಧರೆ? ಸುಡುತ್ತಿರುವ ಈ ಪ್ರಶ್ನೆಗಳಿಗೆ ಉತ್ತರಕೊಡದ ಚಂದ್ರಶೇಖರ್ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರುದ್ಧ ವಿಷವನ್ನು ಕಕ್ಕುತ್ತಿದ್ದಾರೆ.

ಸಿ.ಪಿ.ಐ.(ಎಂ.) 'ಅಭದ್ರತೆ'ಯನ್ನು ಉಂಟುಮಾಡಲು ಪ್ರಯತ್ನಿಸುತ್ತಿದೆ ಎಂಬ ಟೀಕೆ ಚಂದ್ರಶೇಖರರಿಂದ. ಈತ ಅಧ್ಯಕ್ಷನಾಗಿರುವ ಪಕ್ಷವೇ ಅಭದ್ರತೆಯ ಜೀವಂತ ಉದಾಹರಣೆಯಾಗಿರುವಾಗ ಇಂತಹ ಆರೋಪ ಹಾಸ್ಯಾಸ್ಪದವಾದದ್ದು. ಜನತಾ ಪಕ್ಷದ ಅಂಗಪಕ್ಷಗಳ ನಡುವೆ ಇರುವ ಮಾರಕ ಒಳಜಗಳಗಳ ಬಗ್ಗೆ ನಮಗೆ ಗೊತ್ತಿಲ್ಲವೇ? ತನ್ನ ಪಕ್ಷವನ್ನು ಅಭದ್ರತೆ ನುಂಗಿ ಹಾಕುತ್ತಿರುವುದನ್ನು ತಪ್ಪಿಸಲಾಗದ ಒಬ್ಬ ಪಕ್ಷಾಧ್ಯಕ್ಷ ಇತರ ಪಕ್ಷಗಳನ್ನು ಅಭದ್ರತೆಗೆ ಕಾರಣ ಎಂದು ಹೇಳುತ್ತಿದ್ದಾನೆ!

ಸಿ.ಪಿ.ಐ.(ಎಂ.)ನ ಈಶಾನ್ಯಭಾರತದಲ್ಲಿ ತನ್ನ ಪ್ರಭಾವ ವಲಯವನ್ನು ಬೆಳೆಸುತ್ತಿದೆ ಎಂದು ಆತ ಆರೋಪಿಸುತ್ತಿರುವುದಕ್ಕೆ ನಮ್ಮ ಉತ್ತರವಿಷ್ಟೆ: ಸಿ. ಪಿ. ಐ. (ಎಂ.) ಕೂಡ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳಿಗೂ ದೇಶಾದ್ಯಂತ ತಮ್ಮ ಪ್ರಭಾವವನ್ನು ಬೆಳೆಸುವ ಹಕ್ಕಿದೆ. ಇಲ್ಲವೇ, ಇತರ ರಾಜಕೀಯ ಪಕ್ಷಗಳು ತಮ್ಮ ಪ್ರಭಾವ ವಲಯವನ್ನು ವಿಸ್ತರಿಸಿಕೊಂಡರೆ ಸರಿ. ಸಿ. ಪಿ. ಐ. (ಎಂ.) ಹಾಗೆ ಮಾಡಿದರೆ ಮಾತ್ರ ತಪ್ಪು ಎನ್ನುವಷ್ಟರ ಮಟ್ಟಿಗೆ ಆತ ಕಮ್ಯುನಿಸ್ಟ್ ವಿರೋಧಿಯಾಗಿದ್ದಾನೆಯೇ?

ಈತ ಕಕ್ಕುತ್ತಿರುವ ಕಮ್ಯುನಿಸ್ಟ್ ವಿರೋಧಿ ವಿಷಕ್ಕೆ ಕಾರಣವೇನು? ಪ್ರಸಿದ್ಧ ಕಮ್ಯುನಿಸ್ಟ್ ವಿರೋಧಿಗಳಾದ ಜನಸಂಘ-ಆರ್.ಎಸ್.ಎಸ್.ಗಳ ಸಹವಾಸ ದೋಷವೇ ಅಥವಾ ಅದು ತನ್ನ ಸೋಷಿಯಲ್ ಡೆಮೊಕ್ರಟಿಕ್ ಗತಜೀವನದ ಮರುಕಳಿಕೆಯ ಚಿನ್ಹೆಯೇ? ●

ಸಂಪಾದಕೀಯ

[ಒಂದನೇ ಪುಟದಿಂದ]

ವರ್ಗ ಹೋರಾಟದ ಘೋಷಣೆಯನ್ನೂ ಸಹ ಅವರು ಕೊಟ್ಟಿದ್ದಾರೆ. ಆದರೆ ಅವರೇ ಮುಖ್ಯಮಂತ್ರಿಯಾಗಿರುವಾಗಲೇ ಹಳಿಯಾಳದಲ್ಲಿ ಭೂಮಿಗಾಗಿ ಹೋರಾಟ ನಡೆಸಿದ ರೈತರ ಮೇಲೆ ಅಮಾನುಷ ದಬ್ಬಾಳಿಕೆ ನಡೆದು ಮಾರುತಿ ಪವಾರ್‌ರವರ ಕೊಲೆಯಾಯಿತು. ದಿನನಿತ್ಯದ ಬೇಡಿಕೆಗಳಿಗಾಗಿ ಹೋರಾಟ ನಡೆಸುವ ವಿದ್ಯಾರ್ಥಿಗಳಮೇಲೆ ಈಗ ಪೋಲೀಸರ ನರಬೇಟೆ ನಡೆಯುತ್ತಿದೆ. ಕಾರ್ಮಿಕರ ಹೋರಾಟಗಳೂ ತುಳಿಯಲ್ಪಡುತ್ತವೆ. ಈ ಧೋರಣೆಯಲ್ಲಿ ಬದಲಾವಣೆಯಾಗದೆ ವರ್ಗಹೋರಾಟದ ಮಾತು ಪೊಳ್ಳು ಘೋಷಣೆಯಾಗಿ ಮಾತ್ರವಿರುವುದು. ಇದಲ್ಲದೆ ಕಾಂಗ್ರೆಸ್ ನಾಯಕತ್ವವೇ ದೇಶದಲ್ಲಿ ಗುತ್ತೇದಾರಿ ಬೆಳವಣಿಗೆಗೆ ಪ್ರೋತ್ಸಾಹಿಸಿರುವುದು ಎಲ್ಲರಿಗೂ ತಿಳಿದಿದೆ. ಆದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸನ್ನೂ, ಕೋಮುವಾರು ಶಕ್ತಿಗಳನ್ನೂ ಎದುರಿಸಲು ಜನತಾ (ಎಸ್) ಜೊತೆಗೂ ಇತರ ಎಲ್ಲಾ ಎಡ ಪಕ್ಷಗಳ ಜೊತೆಗೂ ಮೈತ್ರಿ ಬೆಳೆಸಬೇಕೆಂದು ಅವರು ಹೇಳಿದ್ದನ್ನು ನಾವು ಸ್ವಾಗತಿಸುತ್ತೇವೆ. ನಮ್ಮ ದೇಶವು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಮೂಲಭೂತ ಬದಲಾವಣೆಯು ಅಗತ್ಯ. ಕಾಂಗ್ರೆಸ್ ಪಕ್ಷದಿಂದ ಅದನ್ನು ನಿರೀಕ್ಷಿಸಲು ಸಾಧ್ಯವಿಲ್ಲವೆಂಬುದನ್ನು 30 ವರ್ಷಗಳ ಕಾಂಗ್ರೆಸ್ ಆಡಳಿತ ತೋರಿಸಿಕೊಟ್ಟಿದೆ. ಅದರ ಆರ್ಥಿಕ-ಸಾಮಾಜಿಕ ನೀತಿಯು ಜನವಿರೋಧಿ ನೀತಿಯಾಗಿದೆ. ಶ್ರೀ ದೇವರಾಜ ಅರಸುರವರು ಅಧ್ಯಕ್ಷರಾದುದರಿಂದ ಕಾಂಗ್ರೆಸ್ ಸಂಸ್ಥೆಯು ವರ್ಗಗುಣದಲ್ಲಿ ಬದಲಾವಣೆಯಾಗುವುದೆನ್ನುವುದನ್ನು ಯಾರೂ ನಂಬಲಾರರು. ಆದರೆ ಮುಂಬರುವ ಚುನಾವಣಾ ಸಂದರ್ಭದಲ್ಲಿ ಸರ್ವಾಧಿಕಾರಿಶಕ್ತಿಯನ್ನೂ, ಜಾತೀಯವಾದಿ ಶಕ್ತಿಯನ್ನೂ ಎದುರಿಸುವ ಕಾರ್ಯದಲ್ಲಿ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗೂಡಿ ಹೋರಾಡಬೇಕಾಗಿರುವುದರಿಂದ ಇದರ ಬಗ್ಗೆ ಅರಸುರವರ ಧೋರಣೆಯು ಸಹಕಾರಿಯಾಗುವುದೆಂದು ನಮ್ಮ ಹಾರೈಕೆ.

●

ಪರಿಸರ

ದಿಲ್ಲಿಯ ಸಮೀಪದಲ್ಲಿ 300 ಎಕರೆ ಭೂಮಿ ಮತ್ತು 300 ಕೋಟಿ ರೂ.ಗಳ ಬಂಡವಾಳವನ್ನು ಇಂದಿರಾಗಾಂಧಿಯವರು ತಮ್ಮ ಮಗ ಸಂಜಯಗಾಂಧಿಗೆ ಮಾಡಿಕೊಟ್ಟರು.

—(ಮಾರುತಿ ಸಣ್ಣಕಾರು ದುರ್ವ್ಯವಹಾರಗಳ ಕುರಿತು ಕೇಂದ್ರ ಸರ್ಕಾರ ನೇಮಿಸಿದ್ದ ಗುಪ್ತಾ ಆಯೋಗದ ವರದಿಯಲ್ಲಿ)

ಅರ್ಧ ಎಕರೆಯೂ ಭೂಮಿ ಇಲ್ಲ. ದಿನವೊಂದಕ್ಕೆ ಸಿಕ್ಕುವ ಕೂಲಿ 3 ರೂಪಾಯಿ. ಈ ಆದಾಯದಿಂದ ನನ್ನ ಮೂರು ಮಕ್ಕಳನ್ನು ಸಾಕುವುದು ಹೇಗೆ?

—(ಕೋಲಾರ ಜಿಲ್ಲಾ ರೈತ ಸಮ್ಮೇಳನದಲ್ಲಿ ಮಹಿಳಾ ಪ್ರತಿನಿಧಿಯೊಬ್ಬರು ಕೇಳಿದ ಪ್ರಶ್ನೆ

ಕಾಂಗೈ ಪಕ್ಷವು ತನ್ನ ಹಿಂದಿನ ಯಾವ ಕೃತ್ಯಕ್ಕೂ ಪಶ್ಚಾತ್ತಾಪ ಪಡುವುದಿಲ್ಲ. ಈಗ ಅದರ ಮುಂದೆ ಒಂದೇ ಒಂದು ಅಂಶದ ಕಾರ್ಯಕ್ರಮ. ಅದೆಂದರೆ ಇಂದಿರಾಗಾಂಧಿಯನ್ನು ಪುನಃ ಅಧಿಕಾರಕ್ಕೆ ತರುವುದು.

"ಪ್ರಜಾವಾಣಿ" ಯಲ್ಲಿ ವಿಶೇಷ ವರದಿ

ನಾಡಿಗೆ ಸ್ವಾತಂತ್ರ್ಯ ಬಂದು 33 ವರ್ಷಗಳಾದರೂ ಭೂಮಿ ಉಳುತ್ತಿರುವ ಎಲ್ಲ ರೈತರೂ ಭೂ ಒಡೆಯರಾಗಲಿಲ್ಲ. ಆದರೆ, ಏನೊಂದು ಕೆಲಸ ಮಾಡದ ಸಂಜಯಗಾಂಧಿ ಮಾತ್ರ 300 ಎಕರೆಗಳ ಭೂ ಮಾಲೀಕನಾದ.

—ಎಚ್. ಮುಗುವಾಳಪ್ಪ
(ಕರ್ನಾಟಕ ರಾಜ್ಯ ರೈತಸಂಘದ ಅಧ್ಯಕ್ಷರು)

1977ರ ಚುನಾವಣೆಯ ಸಮಯದಲ್ಲಿ ಇಂದಿರಾ ಕಾಂಗ್ರೆಸ್ ಕೇವಲ ಸ್ಮರಣ ಸಂಚಿಕೆಗಳ ಜಾಹಿರಾತುಗಳಿಂದಲೇ 18 ಕೋಟಿ ರೂ ಗಳನ್ನು ಸಂಪಾದಿಸಿದೆ. ಹಣದ ಬಳಕೆಯ ಬಗ್ಗೆ ಯಾವುದೇ ಸರಿಯಾದ ಲೆಕ್ಕಪತ್ರಗಳಿಲ್ಲ.

—"ಡೆಕ್ಕನ್ ಹೆರಾಲ್ಡ್"

ನಮ್ಮ ದೇಶದ ಅಣುಶಕ್ತಿ ಕಾರ್ಯಕ್ರಮವು ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವುದಕ್ಕಿಂತ ಹೆಚ್ಚು ಪ್ರಮುಖವಾದದ್ದು. ಚುನಾವಣೆಗಳು ಪಾಕಿಸ್ತಾನದ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ.

—ಪಾಕೀಸ್ತಾನದ ಅಧ್ಯಕ್ಷ ಜಿಯಾಉಲ್.ಹಕ್

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR · M. K. BHAT